# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕಃ 26–05–2016ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| **ಶ್ರೀಯುತರುಗಳಾದ :** | |
| ಎಮ್. ಶಿವರಾಜು – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ವಿ.ವಿ.ಪಾರ್ತಿಬರಾಜನ್ – ಸದಸ್ಯರು | ಉಪ ನಿರ್ದೇಶಕರು (ತೋಟಗಾರಿಕೆ) |
| ಆರ್.ಪದ್ಮಾವತಿ ಅಮರ್‌ನಾಥ್ – ಸದಸ್ಯರು | ಆರೋಗ್ಯಾಧಿಕಾರಿ (ದಕ್ಷಿಣ), |
| ಲಲಿತ ತಿಮ್ಮನಂಜಯ್ಯ.ಕೆ.ಎಲ್.ಆರ್ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಗಾಂಧಿನಗರ), (ಎಂ.ಪಿ.ಇ.ಡಿ) |
| ನೇತ್ರಾ ನಾರಾಯಣ್ – ಸದಸ್ಯರು | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ–2) |
| ಉಮೇಸಲ್ಮ – ಸದಸ್ಯರು | ಸಹಾಯಕ ಆಯುಕ್ತರು (ಆಡಳಿತ), |
| ಎ. ಕೋದಂಡರೆಡ್ಡಿ – ಸದಸ್ಯರು | ಸಹಾಯಕ ಕಾನೂನು ಅಧಿಕಾರಿ |
| ಕೆ. ಪೂರ್ಣಿಮ – ಸದಸ್ಯರು | ಸಂಬಂಧಪಟ್ಟ ಅಧಿಕಾರಿಗಳು, |
| ಕೆ.ವಿ. ರಾಜೇಂದ್ರಕುಮಾರ್ – ಸದಸ್ಯರು | -- |
| **ಗೈರು ಹಾಜರಿದ್ದ ಸದಸ್ಯರುಗಳು** | -- |
| ಕುಸುಮ. ಹೆಚ್ – ಸದಸ್ಯರು | -- |
| ಅರುಣ ರವಿ – ಸದಸ್ಯರು | -- |

***(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)***

***01]. ವಿಷಯದ ಸಂಖ್ಯೆ: ತೆಆಸ್ಥಾಸ/55/2015–16***

ಆಯುಕ್ತರ ಟಿಪ್ಪಣಿ ದಿನಾಂಕ: 02–12–2015ರಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ಇಲಾಖೆಯಲ್ಲಿ ಕ್ಷೇತ್ರ ಕಾರ್ಯಗಳ ಹಿತದೃಷ್ಟಿಯಿಂದ ಅರ್ಹತೆ ಹೊಂದಿರುವ ಹಿರಿಯ ಆರೋಗ್ಯ ಪರಿವೀಕ್ಷಕರ ವೃಂದದಿಂದ ಮುಂಬಡ್ತಿ ಮೂಲಕ ತುಂಬಲು ವಿಧಾನಸಭಾ ಕ್ಷೇತ್ರವಾರು 27 ಹುದ್ದೆಗಳು ಹಾಗೂ ಲೀವ್ ರಿಸರ್ವ್‌ಗಾಗಿ ಅಧಿಕ 03 ಹುದ್ದೆಗಳು ಸೇರಿದಂತೆ ಒಟ್ಟು 30 ಹೆಲ್ತ್ ಸೂಪರ್ ವೈಸರ್ ಹುದ್ದೆಗಳನ್ನು ಸೃಜಿಸಿ, ಈ ಕೆಳಕಂಡಂತೆ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ಸೇರ್ಪಡಿಸುವ ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ತೀರ್ಮಾನಕ್ಕಾಗಿ ಟಿಪ್ಪಣಿಯನ್ನು ಮಂಡಿಸಲಾಗಿರುತ್ತದೆ.

1) Must have passed SSLC Examination with 2 years Sanitary Inspector Training Course.
2) Must have put in a service not less than 10 years in the cadre of Senior Health Inspector.

ಸದರಿ ಟಿಪ್ಪಣಿಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯವರು ಒಪ್ಪಿದ್ದು ಸದರಿ ನಿರ್ಣಯವನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯವರು ಒಪ್ಪಿದ್ದು ಸದರಿ ನಿರ್ಣಯವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯು ಒಪ್ಪಿರುತ್ತದೆ.

ಸದರಿ ನಿರ್ಣಯದಂತೆ, ಪಾಲಿಕೆಯ ಆರೋಗ್ಯ ಇಲಾಖೆಯಲ್ಲಿ ಕ್ಷೇತ್ರ ಕಾರ್ಯಗಳ ಹಿತದೃಷ್ಟಿಯಿಂದ ವಿಧಾನಸಭಾ ಕ್ಷೇತ್ರವಾರು ಒಟ್ಟು 30 ಹೆಲ್ತ್ ಸೂಪರ್‌ವೈಸರ್ ಹುದ್ದೆಗಳನ್ನು ಸೃಜಿಸಿ, ಅರ್ಹತೆ ಹೊಂದಿರುವ ಹಿರಿಯ ಆರೋಗ್ಯ ಪರಿವೀಕ್ಷಕರ ವೃಂದದಿಂದ ಮುಂಬಡ್ತಿ ಮೂಲಕ ತುಂಬಲು ನಿರ್ಣಹಿಸಲಾಗಿರುವುದರಿಂದ ಸದರಿ ಹುದ್ದೆಗಳನ್ನು ಸೃಜಿಸಲು ಹಾಗೂ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ತಿದ್ದುಪಡಿ ತರಲು ಸರ್ಕಾರಕ್ಕೆ ಪತ್ರದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಸದರಿ ಪ್ರಸ್ತಾವನೆಯನ್ನು ಸರ್ಕಾರವು ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ: ನಅಇ 302 ಎಂಎನ್‌ವೈ 2012 ದಿನಾಂಕ: 28-01-2013ರ ಪತ್ರದಲ್ಲಿ ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಿರುತ್ತದೆ.

ಪ್ರಸ್ತುತ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ/ನೌಕರರ ಸಂಘ (ರಿ) ರವರು ಮನವಿ ಸಲ್ಲಿಸಿ, ಪಾಲಿಕೆಯ ಕರ್ತವ್ಯ ನಿರ್ವಹಣೆ ಜವಾಬ್ದಾರಿಗಳ ಬಗ್ಗೆ ಪಾಲಿಕೆ ಅಗತ್ಯ ಹುದ್ದೆಗಳನ್ನು ಸೃಷ್ಟಿಸಲು ಅವಕಾಶವಿರುವುದರಿಂದ ಪಾಲಿಕೆಯ ಉಪ ವಿಭಾಗವಾರು ಒಂದು ಹೆಲ್ತ್ ಸೂಪರ್‌ವೈಸರ್ ಹುದ್ದೆಗಳನ್ನು ಸೃಜಿಸುವ ಬಗ್ಗೆ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲು ಪುನರ್ ಮನವಿಯನ್ನು ನಗರಾಭಿವೃದ್ಧಿ ಇಲಾಖೆಗೆ ಸಲ್ಲಿಸುವಂತೆ ಕೋರಿರುತ್ತಾರೆ.

ಸದರಿ ಮನವಿಯ ಸಂಬಂಧ ಮುಖ್ಯ ಆರೋಗ್ಯಾಧಿಕಾರಿಗಳ ಅಭಿಪ್ರಾಯ ವರದಿಯನ್ನು ಕೋರಲಾದಂತೆ, ಮುಖ್ಯ ಆರೋಗ್ಯಾಧಿಕಾರಿಗಳು ಆರೋಗ್ಯ ವಿಭಾಗಕ್ಕೆ ಸಂಬಂಧಿಸಿದ ರಾಷ್ಟ್ರೀಯ ಕಾರ್ಯಕ್ರಮಗಳ ಯೋಜನೆಗಳು ಚಾಲ್ತಿಯಲ್ಲಿರುವುದರಿಂದ ಅವುಗಳ ಅನುಷ್ಠಾನದ ಹಿತದೃಷ್ಟಿಯಿಂದ ಪಾಲಿಕೆಯ ಪ್ರತಿಯೊಂದು ವಿಧಾನಸಭಾ ಕ್ಷೇತ್ರವಾರು ಹೆಲ್ತ್ ಸೂಪರ್‌ವೈಸರ್ ಹುದ್ದೆಗಳನ್ನು ಸೃಜಿಸುವುದು ಅವಶ್ಯಕವೆಂದು ಅಭಿಪ್ರಾಯಿಸಿರುತ್ತಾರೆ.
ಹೆಲ್ತ್ ಸೂಪರ್‌ವೈಸರ್ ಹುದ್ದೆಗಳನ್ನು ಸೃಜಿಸಿದ್ದಲ್ಲಿ ಪ್ರತಿಯೊಬ್ಬರಿಗೆ ತಗಲುವ ಮಾಹೆಯಾನ ವೇತನದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ವಿವರಗಳು | ಮೊತ್ತ (ರೂ ಗಳಲ್ಲಿ) |
|---|---|---|
| ವೇತನ ಶ್ರೇಣಿ ರೂ.17650-32000 | | |
| 1 | ಮೂಲ ವೇತನ | 17,650-00 |
| 2 | ತುಟ್ಟಿಭತ್ಯೆ | 5,736-00 |
| 3 | ಮನೆ ಬಾಡಿಗೆ ಭತ್ಯೆ | 5,295-00 |
| 4 | ನಗರ ಪರಿಹಾರ ಭತ್ಯೆ | 350-00 |
| 5 | ವೈದ್ಯಕೀಯ ಭತ್ಯ | 100-00 |
| **ಒಟ್ಟು** | | **29,131-00** |

**ಹೆಲ್ತ್ ಸೂಪರ್‌ವೈಸರ್ ಹುದ್ದೆಗಳನ್ನು ಸೃಜಿಸಿದ್ದಲ್ಲಿ ಪ್ರತಿ ಒಬ್ಬರಿಗೆ ಮಾಹೆವಾರು ವೇತನ ರೂ.29,131-00 ಗಳಾಗುತ್ತದೆ.**

ಅದರಂತೆ, ಒಟ್ಟು 30-ಮಂದಿಗೆ

- ಪ್ರತಿ ಮಾಹೆಯಾನ - ರೂ. 8,73,930-00 (29,131 x 30) ಗಳಾಗುತ್ತದೆ
- ಪ್ರತಿ ವರ್ಷಕ್ಕೆ - ರೂ. 1,04,87,160-00 (29,131 x 30 x 12) ಗಳಾಗುತ್ತದೆ

ಹೆಲ್ತ್ ಸೂಪರ್ ವೈಸರ್‌ಗಳಿಗೆ ವಹಿಸಬಹುದಾದ ಕರ್ತವ್ಯಗಳ ಬಗ್ಗೆ ಆರೋಗ್ಯಾಧಿಕಾರಿ (ದಕ್ಷಿಣ) ರವರಿಂದ ಮಾಹಿತಿ ಕೋರಲಾಗಿ, ಆರೋಗ್ಯಾಧಿಕಾರಿ (ದಕ್ಷಿಣ) ರವರು ಹೆಲ್ತ್ ಸೂಪರ್‌ವೈಸರ್‌ಗಳಿಗೆ ಈ ಕೆಳಕಂಡ ಕರ್ತವ್ಯಗಳನ್ನು ವಹಿಸಬಹುದಾಗಿರುತ್ತದೆಂದು ತಿಳಿಸಿರುತ್ತಾರೆ.

1. Regulation of Trades and Licensing
2. Mosquito Control Activities
3. Implementation & monitoring of various National Health Programme
4. Maintenance of Vital statistics including Birth and Death registration
5. Bio medical waste regulation
6. Bulk generator’s waste regulation and maintenance of sanitation of commercial establishment
7. Enforcement of environmental act by preventing less than 40 micron plastics
8. Any other direction given by the Commissioner and other officer work under medical officer of Health in Rang Level

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೆಲ್ತ್ ಸೂಪರ್‌ವೈಸರ್ ಹುದ್ದೆಯು ಅವಶ್ಯಕವಾಗಿರುವುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ಇಲಾಖೆಯಲ್ಲಿ ಕ್ಷೇತ್ರ ಕಾರ್ಯಗಳ ಹಿತದೃಷ್ಟಿಯಿಂದ ಅರ್ಹತೆ ಹೊಂದಿರುವ ಹಿರಿಯ ಆರೋಗ್ಯ ಪರಿವೀಕ್ಷಕರ ವೃಂದದಿಂದ ಮುಂಬಡ್ತಿ ಮೂಲಕ ತುಂಬಲು ವಿಧಾನಸಭಾ ಕ್ಷೇತ್ರವಾರು 27 ಹುದ್ದೆಗಳು ಹಾಗೂ ಲೀವ್ ರಿಸರ್ವ್‌ಗಾಗಿ ಅಧಿಕ 03 ಹುದ್ದೆಗಳು ಸೇರಿದಂತೆ ಒಟ್ಟು 30 ಹುದ್ದೆಗಳನ್ನು ಹೆಲ್ತ್ ಸೂಪರ್ ವೈಸರ್ ಹುದ್ದೆಗಳನ್ನು ಸೃಜಿಸಿ ಈ ಕೆಳಕಂಡಂತೆ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ಸೇರ್ಪಡಿಸುವ ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಕಡತದ ಸಂಖ್ಯೆ: ಬಿ12(4)/ಪಿಆರ್/137/2009–10ರಲ್ಲಿ ಆಯುಕ್ತರು ಮಂಡಿಸಿರುವ ಟಿಪ್ಪಣಿ.

1) Must have passed SSLC Examination with 2 years Sanitary Inspector Training Course
2) Must have put in a service not less than 10 years in the cadre of Senior Health Inspector

**ಸಭೆಯಲ್ಲಿ ಹಾಜರಿದ್ದ ಮುಖ್ಯ ಆರೋಗ್ಯಾಧಿಕಾರಿ ರವರ ವರದಿಯ ಮೇರೆಗೆ ಸದರಿ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ಘನತ್ಯಾಜ್ಯ ನಿರ್ವಹಣೆ ಕಾರ್ಯದ ಜವಾಬ್ದಾರಿಯನ್ನು ವಹಿಸುವ ಷರತ್ತಿಗೊಳಪಡಿಸಿ, ದಿನಾಂಕ: 02.12.2015ರ ಮಾನ್ಯ ಆಯುಕ್ತರವರ ಟಿಪ್ಪಣಿಯನ್ನು ಒಪ್ಪಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 01–02–2016ರ ನಿರ್ಣಯ.**

ನಿರ್ಣಯ: ***ಆಯುಕ್ತರ ದಿನಾಂಕ: 02.12.2015ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ 27 ಹೆಲ್ತ್ ಸೂಪರ್ ವೈಸರ್‌ಗಳ ಹುದ್ದೆಗಳನ್ನು ಸೃಜಿಸಿ ಮುಂಬಡ್ತಿ ನೀಡಿದ್ದೆ ಆದಲ್ಲಿ ಕೆಳ ಹಂತದ ಹುದ್ದೆಗಳು ಖಾಲಿಯಾಗುವುದರಿಂದ ಆರೋಗ್ಯ ಇಲಾಖೆಯ ಕೆಲಸ ಕಾರ್ಯಗಳ ನಿರ್ವಹಣೆಯಲ್ಲಿ ತೊಡಕಾಗುವುದನ್ನು ಪರಿಗಣಿಸಿ ಆರೋಗ್ಯ ಇಲಾಖೆಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಖಾಲಿಯಿರುವ ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿದ ನಂತರ ಸದರಿ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದೆಂದು ಸಮಿತಿಯು ತೀರ್ಮಾನಿಸಿತು.***

***02]. ವಿಷಯದ ಸಂಖ್ಯೆ: ತೆಆಸ್ಥಾಸ/75/2015–16***

ಆಯುಕ್ತರ ದಿನಾಂಕ: 23.02.2016 ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ, 2016–17ನೇ ಸಾಲಿನ ಉದ್ದಿಮೆ ಪರವಾನಿಗೆ ನವೀಕರಣವನ್ನು ದಿನಾಂಕ: 01.02.2016 ರಿಂದ ಪ್ರಾರಂಭಿಸಲಾಗಿದೆ. ಫೆಬ್ರವರಿ ಮಾಹೆಯಲ್ಲಿ ದಂಡವಿಲ್ಲದೆ ಉದ್ದಿಮೆ ಪರವಾನಿಗೆ ನವೀಕರಣ ಮಾಡುತ್ತಿದ್ದು, ಮಾರ್ಚ್ ಮಾಹೆಯಲ್ಲಿ ಶೇ.25% ರಷ್ಟು

ಹಾಗೂ ಏಪ್ರಿಲ್ ರಿಂದ ಜೂನ್ ಅಂತ್ಯದವರೆಗೆ ಶೇ.100% ರಷ್ಟು ಪರವಾನಿಗೆ ಶುಲ್ಕದ ದಂಡದೊಂದಿಗೆ ನವೀಕರಣವನ್ನು ಮಾಡಲಾಗುತ್ತಿದೆ. ಹಿಂದಿನ ವರ್ಷಗಳಲ್ಲಿ ಜುಲೈ 1ರಿಂದ ಉದ್ದಿಮೆ ಪರವಾನಿಗೆ ತಂತಾನೆ ರದ್ದು ಆಗಲಿದ್ದು ಉದ್ದಿಮೆಯನ್ನು ಮುಚ್ಚಲು ಕ್ರಮವಹಿಸಲಾಗುತ್ತಿತ್ತು. ಇದರಿಂದಾಗಿ ಉದ್ದಿಮೆದಾರರು ಜುಲೈ 1ರ ನಂತರ ಹೊಸದಾಗಿ ಪರವಾನಿಗೆ ಪಡೆಯುತ್ತಿದ್ದು ಇದರಿಂದಾಗಿ ಪಾಲಿಕೆಗೆ ಆರ್ಥಿಕವಾಗಿ ನಷ್ಟವಾಗುತ್ತಿತ್ತು. ಈ ಬಗ್ಗೆ ಮಾನ್ಯ ವಿಶೇಷ ಆಯುಕ್ತರು ತಮ್ಮ ಟಿಪ್ಪಣಿಯಲ್ಲಿ ಜುಲೈ 1ರ ನಂತರ ಉದ್ದಿಮೆ ಪರವಾನಿಗೆಯನ್ನು ಶೇ.200% ರಷ್ಟು ಪರವಾನಿಗೆ ಶುಲ್ಕದ ದಂಡದೊಂದಿಗೆ ನವೀಕರಿಸಬಹುದಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಕೆ.ಎಂ.ಸಿ. ಕಾಯ್ದೆ ಹಾಗೂ ಬೈಲಾಗಳಲ್ಲಿ ಉದ್ದಿಮೆ ಪರವಾನಿಗೆಯನ್ನು 3 ವರ್ಷಗಳವರೆಗೆ ನವೀಕರಿಸಲು ಅವಕಾಶವಿರುತ್ತದೆ.

ಅದರಂತೆ, ಜುಲೈ 1ರಿಂದ 3 ವರ್ಷಗಳ ಅವಧಿ ತನಕ ಶೇ.200% ರಷ್ಟು ಪರವಾನಿಗೆ ಶುಲ್ಕದ ದಂಡದೊಂದಿಗೆ ನವೀಕರಿಸುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ.

ನಿರ್ಣಯ: ***ಎಲ್ಲಾ ವಿಧದ ಉದ್ದಿಮೆ ಪರವಾನಿಗೆ ನವೀಕರಣಕ್ಕಾಗಿ ಒಂದು ವೇಳೆ ಜೂನ್ ತಿಂಗಳ ನಂತರದ ತಿಂಗಳುಗಳಿಗೂ ನವಿಕರಣಕ್ಕಾಗಿ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ, ಪರವಾನಿಗೆ ನವಿಕರಣ ಶುಲ್ಕ + ಶೇಕಡ 100% ರಷ್ಟು ದಂಡ ಸಹಿತ ಮಾತ್ರ ಪಡೆದುಕೊಂಡು ನವಿಕರಣಕ್ಕೆ ಅವಕಾಶ ಕಲ್ಪಿಸುವ ತಿದ್ದುಪಡಿಯೊಂದಿಗೆ ಆಯುಕ್ತರ ದಿನಾಂಕ: 23.02.2016ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.***

## ***03]. ವಿಷಯದ ಸಂಖ್ಯೆ: ತೆಆಸ್ಥಾಸ/04/2016-17***

ಆಯುಕ್ತರ ಟಿಪ್ಪಣಿ ದಿನಾಂಕ: 02.04.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕೆ ಸ್ಥಾಯಿ ಸಮಿತಿಯ ಸಭೆಯಲ್ಲಿ ತೆಗೆದುಕೊಂಡಿರುವ ವಿಷಯ ಸಂಖ್ಯೆ: ತೋಸ್ಥಾಸ/21/2015-16, ದಿನಾಂಕ: 08.01.2016ರ ನಿರ್ಣಯದಲ್ಲಿ, ದಿನಾಂಕ: 01.12.2015 ರಿಂದ 31.05.2016ರವರೆಗೆ ಉದ್ಯಾನವನಗಳ ನಿರ್ವಹಣೆಯನ್ನು ಹಾಲಿ ನಿರ್ವಹಣೆ ಮಾಡುತ್ತಿರುವ ಗುತ್ತಿಗೆದಾರರಿಂದಲೇ ಮುಂದುವರೆಸುವಂತೆ ಸಮಿತಿಯು ತೀರ್ಮಾನಿಸಿ ಹಾಗೂ 2015-16ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-0088 ರಲ್ಲಿರುವ ರೂ.3,000.00 ಲಕ್ಷಗಳ ಅನುದಾನವನ್ನು ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳಿಗೆ ಸಂಬಂಧಪಟ್ಟ ಬಾಕಿಯಿರುವ ಡಿ.ಸಿ.ಬಿಲ್ಲುಗಳನ್ನು ಹಂತಹಂತವಾಗಿ ಪಾಲಿಕೆಯ ನಿಯಮಾನುಸಾರ ಹಣ ಬಿಡುಗಡೆ ಮಾಡಿ, ಮರು ಹೊಂದಾಣಿಕೆ ಮಾಡಿಕೊಂಡಿರುವ ಸದರಿ ರೂ.3,000.00 ಲಕ್ಷಗಳ ಅನುದಾನವನ್ನು 2016-17ನೇ ಸಾಲಿನ ಆಯವ್ಯಯದಲ್ಲಿ ಮುಂದುವರೆದ ಕಾಮಗಾರಿಗಳ ಅನುದಾನದ ಅಡಿಯಲ್ಲಿ ಕಾದಿರಿಸಿಕೊಳ್ಳುವಂತೆ ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿದೆ.

ಮುಂದುವರೆದಂತೆ, ಲೆಕ್ಕಶೀರ್ಷಿಕೆ ಪಿ-0088 ಅಡಿಯಲ್ಲಿ ಕೈಗೊಂಡ ಉದ್ಯಾನವನಗಳ ನಿರ್ವಹಣೆ ಮತ್ತು ಅಭಿವೃದ್ಧಿ ಕಾಮಗಾರಿಗಳ ಬಾಕಿ ಬಿಲ್ಲುಗಳನ್ನು ಪಾವತಿಸಲು 2015-16ನೇ ಸಾಲಿನ ಲೆಕ್ಕಶೀರ್ಷಿಕೆ ಪಿ-0088 ಅಡಿ ಲಭ್ಯವಿರುವ ರೂ.30.00 ಕೋಟಿ ಅನುದಾನದಲ್ಲಿ ರೂ.14.00ಕೋಟಿಗಳನ್ನು ಮರುಹೊಂದಾಣಿಕೆ ಮಾಡುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

## *16]. ವಿಷಯದ ಸಂಖ್ಯೆಃ ತೆಆಸ್ಥಾಸ/05/2016–17*

ಆಯುಕ್ತರ ದಿನಾಂಕ: 07.04.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಕರ್ನಾಟಕ ವಿಧಾನಸಭೆ/ವಿಧಾನ ಪರಿಷತ್ತಿನ ಅಧಿವೇಶನಗಳು ನಡೆಯುವ ಸಂದರ್ಭದಲ್ಲಿ ಆಯುಕ್ತರ ಆಪ್ತ ಶಾಖೆ, ಅಪರ ಆಯುಕ್ತರು (ಆಡಳಿತ) ರವರ ಆಪ್ತ ಶಾಖೆ ಹಾಗೂ ಆಯುಕ್ತರ ಕಛೇರಿ ಆಡಳಿತ ಶಾಖೆಯ ಅಧಿಕಾರಿ/ನೌಕರರು ಕಛೇರಿ ಅವಧಿ ಮುಗಿದ ನಂತರವೂ ಕಾರ್ಯನಿರ್ವಹಿಸುತ್ತಿರುತ್ತಾರೆ ಹಾಗೂ ವಿಧಾನಸಭೆ /ವಿಧಾನ ಪರಿಷತ್ತಿಗೆ ಉತ್ತರಿಸಬೇಕಾದ ಪ್ರಶ್ನೆಗಳಿಗೆ ಸಂಬಂಧಪಟ್ಟ ಪಾಲಿಕೆಯ ಎಲ್ಲಾ ಕಛೇರಿಗಳಿಂದ ಉತ್ತರ ಪಡೆದು ಕ್ರೋಢೀಕರಿಸಿ ಒದಗಿಸುವ ನಿಟ್ಟಿನಲ್ಲಿ ತಾವು ಹಾಲಿ ನಿರ್ವಹಿಸುತ್ತಿರುವ ಕೆಲಸಕಾರ್ಯಗಳ ಜೊತೆಗೆ ಹೆಚ್ಚಿನ ಅವಧಿಯಲ್ಲಿ ಹಾಗೂ ಕಛೇರಿ ಅವಧಿ ಮುಗಿದ ನಂತರವೂ ಕಾರ್ಯನಿರ್ವಹಿಸುತ್ತಿರುವ ಹಿನ್ನಲೆಯಲ್ಲಿ ಅವರುಗಳಿಗೆ ಪ್ರತಿ ಕರ್ನಾಟಕ ವಿಧಾನಸಭೆ/ವಿಧಾನ ಪರಿಷತ್ತಿನ ಅಧಿವೇಶನ ನಡೆಯುವ ಅವಧಿಯ ದಿನಗಳಿಗೆ ಗೌರವ ಧನ ನಿಗಧಿಗೆ ಸಂಬಂಧಿಸಿದ ಸರ್ಕಾರದ ವಿಧಾನಸಭೆಯ ಸಚಿವಾಲಯದಿಂದ ಆಗಿಂದಾಗ್ಗೆ ಹೊರಡಿಸಲಾಗುತ್ತಿರುವ ಆದೇಶಗಳನ್ವಯ ಪಾಲಿಕೆಯಲ್ಲಿ ಅಧಿವೇಶನದ ಸಂದರ್ಭದಲ್ಲಿ ಕಾರ್ಯನಿರ್ವಹಿಸಿರುವ ಅಧಿಕಾರಿ ಸಿಬ್ಬಂದಿಗಳಿಗೆ ಗೌರವಧನ ನಿಗಧಿಪಡಿಸಿ ಮಂಜೂರು ಮಾಡಲಾಗಿರುತ್ತದೆ. ಪ್ರಸ್ತುತ 2014–15ನೇ ಲೆಕ್ಕ ಪರಿಶೋಧನಾ ಸಂದರ್ಭದಲ್ಲಿ ಆಕ್ಷೇಪಣೆಗಳನ್ನು ವ್ಯಕ್ತಪಡಿಸುತ್ತಾ, ಇನ್ನು ಮುಂದೆ ಸದರಿ ಸಚಿವಾಲಯದ ಆದೇಶವನ್ನು ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿ ಘಟನೋತ್ತರ ಅನುಮೋದನೆ ಪಡೆದು ಗೌರವಧನ ಮಂಜೂರಾತಿಗೆ ಕ್ರಮವಹಿಸಬಹುದಾಗಿರುತ್ತದೆಂದು ಅಭಿಪ್ರಾಯಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಈ ಹಿಂದಿನ ಅಧಿವೇಶನದ ಸಂದರ್ಭದಲ್ಲಿ ಕಾರ್ಯನಿರ್ವಹಿಸಿರುವ ಅಧಿಕಾರಿ/ಸಿಬ್ಬಂದಿಗಳ ಪಾವತಿಸಿರುವ ಗೌರವಧನ ಮಂಜೂರಾತಿಗೆ ಘಟನೋತ್ತರ ಅನುಮೋದನೆ ನೀಡುವ ಸಂಬಂಧ ಹಾಗೂ ಮುಂಬರುವ ಅಧಿವೇಶನದ ಸಂದರ್ಭದಲ್ಲಿ ಕಾರ್ಯನಿರ್ವಹಿಸಲಿರುವ ಆಯುಕ್ತರ ಆಪ್ತ ಶಾಖೆ, ಅಪರ ಆಯುಕ್ತರು (ಆಡಳಿತ) ರವರ ಆಪ್ತ ಶಾಖೆ ಹಾಗೂ ಆಯುಕ್ತರ ಕಛೇರಿ ಆಡಳಿತ ಶಾಖೆಯ ಅಧಿಕಾರಿ/ಸಿಬ್ಬಂದಿಗೆ ಗೌರವಧನ ಮಂಜೂರಾತಿಗೆ ಸಂಬಂಧಿಸಿದಂತೆ ಸಚಿವಾಲಯದ ಆದೇಶ ಸಂಖ್ಯೆ:ಕವಿಸಸ/ಆ–3/117/ಗೌಧಹೆ/2013, ದಿನಾಂಕ:13–09–2013ರ ರಲ್ಲಿ ತಿಳಿಸಿರುವ ದರಗಳನ್ವಯ ಗೌರವಧನವನ್ನು ಪಾವತಿಸುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ: **ಆಯುಕ್ತರ ದಿನಾಂಕ: 07.04.2016 ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ ಈ ಹಿಂದೆ ಪಾವತಿಸಿರುವ ಗೌರವಧನ ಮಂಜೂರಾತಿಗೆ ಒಪ್ಪುತ್ತಾ, ಇನ್ನು ಮುಂದೆ ಅಧಿವೇಶನ ನಡೆಯುವ ಸಂದರ್ಭದಲ್ಲಿ ಪಾಲಿಕೆಯಿಂದ ಅಧಿಕೃತವಾಗಿ ಸಿಬ್ಬಂದಿಗಳನ್ನು ನಿಯೋಜಿಸಿ, ನಿಯೋಜಿತ ಸಿಬ್ಬಂದಿಯು ಅಧಿಕವಾಗಿ ಎಷ್ಟು ಸಮಯ ಕರ್ತವ್ಯ ನಿರ್ವಹಿಸಿರುತ್ತಾರೆ ಎಂಬುದರ ವಿವರದೊಂದಿಗೆ ಪ್ರತಿಯೊಂದು ಅಧಿವೇಶನದ ಸಂದರ್ಭದಲ್ಲಿ ಕಡತವನ್ನು ಸಮಿತಿಯ ಮುಂದೆ ಮಂಡಿಸಿ ಗೌರವಧನ ಪಾವತಿಸುವ ಬಗ್ಗೆ ಅನುಮೋದನೆ ಪಡೆದುಕೊಳ್ಳುವುದನ್ನು ಕಡ್ಡಾಯಗೊಳಿಸಿ, ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿತು.**

## *05]. ವಿಷಯದ ಸಂಖ್ಯೆಃ ತೆಆಸ್ಥಾಸ/12/2016–17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 12.05.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮೇಲಿನ ವಿಷಯಕ್ಕೆ ಸಂಬಂದಿಸಿದಂತೆ ಪಾಲಿಕೆಯ ಅವರಣದಲ್ಲಿರುವ ಕೆನರಾ ಬ್ಯಾಂಕ್, ವಿಸ್ತರಣಾ ಶಾಖೆಯು ಅಂದಿನ ಮೈಸೂರು ಸರ್ಕಾರದ ಆದೇಶ ಸಂಖ್ಯೆ: GO NO: HMA/5/MNY/70 dt: 03/09.03.1970 ರೀತ್ಯಾ

ಕಾರ್ಯ ನಿರ್ವಹಿಸುತ್ತಿರುತ್ತದೆ. ಸದರಿ ಶಾಖೆಯು ಹಾಲಿ ಪಾಲಿಕೆಯ ಅವರಣದ ಅನೆಕ್ಸ್ ಕಟ್ಟಡ–1ರ ನೆಲಮಹಡಿಯ ಕೊಠಡಿ ಸಂಖ್ಯೆ: 02ರಲ್ಲಿ ಕಾರ್ಯ ನಿರ್ವಹಿಸುತ್ತಿದ್ದೆ, ಈ ಕೊಠಡಿಯು ಸುಮಾರು 38.15 ಚ.ಮೀ ವಿಸ್ತೀರ್ಣವಿದೆ. ಸದರಿ ಶಾಖೆಯು ಪಾಲಿಕೆಯ ಎಲ್ಲಾ ಹಣಕಾಸು ವ್ಯವಹಾರಗಳನ್ನು ಹಾಗೂ ಸಿಬ್ಬಂದಿಗಳ ವೇತನ ವಿತರಣೆ ಸೇರಿದಂತೆ ಪಾಲಿಕೆಗೆ ಉಚಿತ ಸೇವೆ ನೀಡುತ್ತಿರುತ್ತದೆ.

ಇತ್ತೀಚಿಗೆ ಪಾಲಿಕೆಯಲ್ಲಿ ಬಿಲ್ಲುಗಳ ಪಾವತಿಗಳನ್ನು 'ಆನ್‌ಲೈನ್' ಪದ್ಧತಿಯಲ್ಲಿ ನಿರ್ವಹಿಸುತ್ತಿದ್ದು, ಸದರಿ ಆನ್‌ಲೈನ್ ಸೇವೆಯನ್ನು ಹಾಗೂ ಆಸ್ತಿ ತೆರಿಗೆ ಪಾವತಿಯ ಸೇವೆಯನ್ನು ಕೆನರಾ ಬ್ಯಾಂಕ್ ಒದಗಿಸುತ್ತಿದೆ. ಈ ಹೆಚ್ಚುವರಿ ಕೆಲಸದ ನಿರ್ವಹಣೆಗೆ ಹಾಗೂ ಎ.ಟಿ.ಎಂ ಘಟಕ ಸ್ಥಾಪಿಸಲು ಹೆಚ್ಚುವರಿ ಸ್ಥಳದ ಅವಶ್ಯಕತೆಯಿದ್ದು, ಸದರಿ ಶಾಖೆಗೆ ಹೊಂದಿಕೊಂಡಿರುವ 38.15 ಚ.ಮೀ ವಿಸ್ತೀರ್ಣದ ಕೊಠಡಿಯನ್ನು ಹೆಚ್ಚುವರಿಯಾಗಿ ಹಂಚಿಕೆ ಮಾಡಲು ದಿನಾಂಕ: 31.10.2015ರಂದು ಸದರಿ ಬ್ಯಾಂಕ್‌ನ ಮಹಾ ನಿರ್ದೇಶಕರು, ಕೋರಿಕೆ ಸಲ್ಲಿಸಿರುತ್ತಾರೆ.

ಈ ಮೇರೆಗೆ ಸದರಿ ಕೆನರಾ ಬ್ಯಾಂಕ್ ಶಾಖೆಗೆ ಹೆಚ್ಚವರಿ ಕಾರ್ಯ ನಿರ್ವಹಿಸಲು ಹಾಗೂ ಎ.ಟಿ.ಎಂ ಶಾಖೆ ತೆರೆಯಲು ಹಾಲಿ ಕಾರ್ಯ ನಿರ್ವಹಿಸುತ್ತಿರುವ ಕೊಠಡಿ ಸಂಖ್ಯೆ: 02ಕ್ಕೆ ಹೊಂದಿಕೊಂಡಿರುವ ಕೊಠಡಿ ಸಂಖ್ಯೆ 3 ಅನ್ನು ಹಂಚಿಕೆಗೆ ಪರಿಗಣಿಸುವುದು ಸಮಂಜಸವಾಗಿರುತ್ತದೆ.

ಆದರೆ ಸದರಿ ಕೆನರಾ ಬ್ಯಾಂಕ್ ಶಾಖೆಯು ಸರ್ಕಾರದ ಅನುಮೋದನೆ ಮೇರೆಗೆ 1970 ರಿಂದಲೇ ಪಾಲಿಕೆಯ ಆವರಣದಲ್ಲಿ ಕೆಲಸ ನಿರ್ವಹಿಸುತ್ತಿರುವುದರಿಂದ ಹಾಗೂ ಪಾಲಿಕೆಗೆ ಉಚಿತ ಬ್ಯಾಂಕ್ ಸೇವೆ ನೀಡುತ್ತಿರುವ ಹಿನ್ನಲೆಯಲ್ಲಿ ಹೆಚ್ಚುವರಿ ಸ್ಥಳಾವಕಾಶವನ್ನು ನೀಡಬಹುದಾಗಿರುತ್ತದೆ. ಸದರಿ ಶಾಖೆಯು ಎಲ್ಲಿಯವರೆವಿಗೆ ಪಾಲಿಕೆಯ ವ್ಯವಹಾರಗಳನ್ನು ಪಾಲಿಕೆಗಾಗಿ ನೀಡುತ್ತದೆಯೋ ಅಲ್ಲಿಯವರೆವಿಗೆ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಕೊಠಡಿ ಸಂಖ್ಯೆ: 02ರ ಜೊತೆಗೆ ಹೆಚ್ಚುವರಿಯಾಗಿ ಇದಕ್ಕೆ ಹೊಂದಿಕೊಂಡಿರುವ ಕೊಠಡಿ ಸಂಖ್ಯೆ: 03ನ್ನು ಕೆನರಾ ಬ್ಯಾಂಕ್‌ಗೆ ನೀಡಬಹುದಾಗಿರುತ್ತದೆ.

ಈ ಹಿನ್ನಲೆಯಲ್ಲಿ ಕೆಳಕಂಡ ಅಂಶಗಳ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

1. ಪಾಲಿಕೆಯ ಆವರಣದಲ್ಲಿನ ಅನೆಕ್ಸ್ ಕಟ್ಟಡ–1 ರಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಕೆನರಾ ಬ್ಯಾಂಕ್ ಕೊಠಡಿ ಸಂಖ್ಯೆ: 02ರ ಪಕ್ಕಕ್ಕೆ ಹೊಂದಿಕೊಂಡ ಕೊಠಡಿ ಸಂಖ್ಯೆ: 03ನ್ನು (38.15 ಚ.ಮೀ carpet area) ವಿಸ್ತೀರ್ಣ ಕೊಠಡಿಯನ್ನು ಬ್ಯಾಂಕ್‌ಗೆ ನೀಡುವ ಬಗ್ಗೆ ಮತ್ತು
2. ಸದರಿ ಬ್ಯಾಂಕ್‌ನೊಂದಿಗೆ ಅಗತ್ಯ ಷರತ್ತುಗಳೊಂದಿಗೆ ಕರಾರು ಮಾಡಿಕೊಳ್ಳುವುದು.

ಮೇಲಿನ ಎರಡೂ ಅಂಶಗಳಿಗೆ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ನಿರ್ಣಯಕ್ಕಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 12.05.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***06]. ವಿಷಯದ ಸಂಖ್ಯೆ: ತೆಆಸ್ಥಾಸ/13/2016–17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 12.05.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ರಾಮಸ್ವಾಮಿ ಪಾಳ್ಯ, ವಾರ್ಡ್ ಸಂಖ್ಯೆ 62ರ ಪಾಲಿಕೆ ಸದಸ್ಯರಾದ ಶ್ರೀಮತಿ ನೇತ್ರಾವತಿ ಕೃಷ್ಣೇಗೌಡ

ರವರು ಪತ್ರವನ್ನು ಸಲ್ಲಿಸಿ, ದಿನನಿತ್ಯವು ತಮ್ಮ ವಾರ್ಡಿನ ನಾಗರೀಕರ ಕುಂದು/ಕೊರತೆಗಳನ್ನು ಆಲಿಸಿ ಅವರ ಬೇಡಿಕೆಗಳಿಗೆ ಸ್ಪಂದಿಸಬೇಕಾದ ಅನಿವಾರ್ಯತೆಯಿದ್ದು ಇದಕ್ಕಾಗಿ ವಾರ್ಡಿನಲ್ಲಿ ಕಛೇರಿಯ ಅವಶ್ಯಕತೆಯಿರುವುದಾಗಿ, ತಮ್ಮ ವಾರ್ಡಿನಲ್ಲಿ ಪಾಲಿಕೆಯ ಕಟ್ಟಡಗಳ ಲಭ್ಯತೆಯಿಲ್ಲದೇ ಇರುವುದರಿಂದ ತಮ್ಮ ವಾರ್ಡಿನಲ್ಲಿರುವ ಖಾಸಗಿ ಸ್ವತ್ತಿನ ನಂ.35, ಆಂಜನೇಯ ಸ್ವಾಮಿ ಟೆಂಪಲ್ ಬ್ಲಾಕ್, ಶೇಷಾದ್ರಿ ರಸ್ತೆ, ಮಾರಪ್ಪ ಗಾರ್ಡನ್ ಸ್ವತ್ತಿನಲ್ಲಿರುವ ಕಟ್ಟಡವನ್ನು ಬಾಡಿಗೆ ರೂಪದಲ್ಲಿ ಪಡೆದು ವಾರ್ಡ್ ಕಛೇರಿಗೆ ಉಪಯೋಗಿಸಿಕೊಳ್ಳಲು ಅನುಮತಿ ನೀಡಲು ಕೋರಿರುತ್ತಾರೆ.

ಈ ಸಂಬಂಧ ಕಾರ್ಯಪಾಲಕ ಅಭಿಯಂತರರು ನಂ.1, ಕಟ್ಟಡಗಳ ವಿಭಾಗ, ಬೆಂಗಳೂರು ರವರು ಸದರಿ ಕಟ್ಟಡದ ವಿಸ್ತೀರ್ಣಗಳನ್ನು ಪರಿಗಣಿಸಿ ಲೋಕೋಪಯೋಗಿ ಇಲಾಖೆಯ ನಿಯಮಾನುಸಾರ ಲೆಕ್ಕಾಚಾರ ಮಾಡಿ ಸದರಿ ಕಟ್ಟಡಕ್ಕೆ ಪ್ರತಿ ಮಾಸಿಕ ರೂ.18,142-00ಗಳ ಬಾಡಿಗೆಯನ್ನು ನಿಗಧಿಪಡಿಸಿರುತ್ತಾರೆ.

ಸದರಿ ಸ್ವತ್ತಿನ ಒಟ್ಟು ವಿಸ್ತೀರ್ಣ 2200 ಚದರ ಅಡಿಗಳಾಗಿದ್ದು, ಕಟ್ಟಡದ ಒಟ್ಟು ವಿಸ್ತೀರ್ಣ 1106 ಚದರ ಅಡಿಗಳಾಗಿದ್ದು, ಲೋಕೋಪಯೋಗಿ ಇಲಾಖೆಯ ನಿಯಮಾನುಸಾರ ಲೆಕ್ಕಾಚಾರ ಮಾಡಿರುವ ಕಟ್ಟಡದ ಬಾಡಿಗೆ ಮಾಹೆಯಾನ ರೂ.18,142.00 ಗಳನ್ನು ಪಾವತಿಸುವ ಮೂಲಕ ಸ್ವತ್ತಿನ ನಂ.35, ಆಂಜನೇಯ ಸ್ವಾಮಿ ಟೆಂಪಲ್ ಬ್ಲಾಕ್, ಶೇಷಾದ್ರಿ ರಸ್ತೆ, ಮಾರಪ್ಪ ಗಾರ್ಡನ್ ಸ್ವತ್ತಿನಲ್ಲಿರುವ ಖಾಸಗಿ ಕಟ್ಟಡವನ್ನು ಬಾಡಿಗೆ ರೂಪದಲ್ಲಿ ಪಡೆದುಕೊಳ್ಳಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 12.05.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***07]. ವಿಷಯದ ಸಂಖ್ಯೆ: ತೆಆಸ್ಥಾಸ/14/2016-17***

ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ:12.05.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಕಾಮಗಾರಿ / ಯೋಜನೆಗಳನ್ನು ಕೈಗೊಂಡಿದ್ದು, ಈ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಖಾಸಗಿ ಸ್ವತ್ತುಗಳ ಅವಶ್ಯಕತೆ ಇರುತ್ತದೆ. ಕೆಲವೊಂದು ಸ್ವತ್ತುಗಳನ್ನು ಖಾಸಗಿ ಮಾಲೀಕರುಗಳು ಟಿಡಿಆರ್ ಅಡಿಯಲ್ಲಿ ಸ್ವತ್ತನ್ನು ಹಸ್ತಾಂತರಿಸಲು ಒಪ್ಪುತ್ತಿಲ್ಲವಾದ ಕಾರಣ ಭೂಸ್ವಾಧೀನ ಪಡಿಸಿಕೊಳ್ಳಬೇಕಾಗಿರುವ ಖಾಸಗಿ ಸ್ವತ್ತುಗಳನ್ನು ಖರೀದಿಸಲು ಕೆ.ಎಂ.ಸಿ ಕಾಯ್ದೆ 1976 ಸೆಕ್ಷನ್ 175 ರಂತೆ ಅವಕಾಶ ಇರುತ್ತದೆ. ಭೂಸ್ವಾಧೀನ ಕಾಯ್ದೆ ಅಡಿಯಲ್ಲಿ ಪ್ರಕ್ರಿಯೆಯು ವಿಳಂಭವಾಗುವ ಹಿನ್ನೆಲೆಯಲ್ಲಿ ಮತ್ತು ಯೋಜನೆಯನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಲುವ ಹಿನ್ನೆಲೆಯಲ್ಲಿ ಕೆ.ಎಂ.ಸಿ ಕಾಯ್ದೆ 1976 ಸೆಕ್ಷನ್ 175 ರಡಿಯಲ್ಲಿ ಸದರಿ ಯೋಜನೆಗಳಿಗೆ ಬೇಕಿರುವ ಖಾಸಗಿ ಸ್ವತ್ತುಗಳನ್ನು ಪಾಲಿಕೆಯು ಖರೀದಿಸಿ ಯೊಜನೆಗೆ ಉಪಯೋಗಿಸಿಕೊಳ್ಳುವುದು ಸೂಕ್ತವಾಗಿದೆ.

ಈ ಮೇರೆಗೆ ಖಾಸಗಿ ಸ್ವತ್ತಿನ ಮಾಲೀಕರೊಂದಿಗೆ ದರ ಸಂಧಾನ ನಡೆಸಿ ದರವನ್ನು ನಿಗದಿಪಡಿಸಬೇಕಾಗಿರುತ್ತದೆ. ಅದರಂತೆ ಚಾಲ್ತಿಯಲ್ಲಿರುವ ಮಾರುಕಟ್ಟೆ ಬೆಲೆ, ಮಾರ್ಗದರ್ಶಿ ಬೆಲೆ (Guidance Value) ಮತ್ತು ಭೂ-ಸ್ವಾಧಿನ ಕಾಯ್ದೆ ಅಧಿನಿಯಮ-2013ನ್ನು ಆಧಾರವಾಗಿ ಇಟ್ಟುಕೊಂಡು ದರ ಸಂಧಾನ ನಡೆಸಿ ದರ ನಿಗದಿಪಡಿಸುವುದು ಅವಶ್ಯವಿರುತ್ತದೆ. ಆದ್ದರಿಂದ ಖರೀದಿ ಮತ್ತು ದರ ಸಂಧಾನವನ್ನು ಪಾರದರ್ಶಕವಾಗಿ ನಡೆಸುವುದು ಅತ್ಯಾವಶ್ಯಕವಾಗಿವ ಹಿನ್ನೆಲೆಯಲ್ಲಿ ಕೇಂದ್ರ ಕಛೇರಿಯ ಮಟ್ಟದಲ್ಲಿ ಈ ಕೆಳಕಂಡ ಅಧಿಕಾರಿಗಳ ಸಮಿತಿ ರಚಿಸಲಾಗಿದೆ.

| | | |
|---|---|---|
| 1 | ವಿಶೇಷ ಆಯುಕ್ತರು (ಯೋಜನೆ) | ಅಧ್ಯಕ್ಷರು |
| 2 | ಸಂಬಂಧಪಟ್ಟ ವಲಯದ ಅಪರ / ಜಂಟಿ ಆಯುಕ್ತರು | ಸದಸ್ಯರು |
| 3 | ಕಾನೂನು ಕೋಶದ ಮುಖ್ಯಸ್ಥರು | ಸದಸ್ಯರು |
| 4 | ಸಂಬಂಧಪಟ್ಟ ಮುಖ್ಯ ಅಭಿಯಂತರರು | ಸದಸ್ಯರು |
| 5 | ಮುಖ್ಯ ಲೆಕ್ಕಾಧಿಕಾರಿಗಳು | ಸದಸ್ಯರು |
| 6 | ಉಪ ಆಯುಕ್ತರು (ಭೂಸ್ವಾಧೀನ) | ಸದಸ್ಯರು |
| 7 | ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು | ಸಂಚಾಲಕರು ಮತ್ತು ಸದಸ್ಯರು |
| 8 | ವಿಶೇಷ ಭೂಸ್ವಾಧೀನ ಅಧಿಕಾರಿ | ಸದಸ್ಯರು |

ಸದರಿ ಕೇಂದ್ರ ಕಛೇರಿಯಲ್ಲಿ ರಚಿಸಿರುವ ಸಮಿತಿಯ ಬಗ್ಗೆ ಹೊರಡಿಸಿರುವ ಮಾನ್ಯ ಆಯುಕ್ತರವರ ಆದೇಶ ಸಂಖ್ಯೆ: ಕಾ.ಪ.ಅ/ಯೋ–ಕೇ–2/ಪಿ.ಆರ್/04/2016–17, ದಿನಾಂಕ: 13.04.2016ರ ಕ್ರಮವನ್ನು ಸ್ಥಿರಿಕರಿಸಿ ಕೆ.ಎಂ.ಸಿ ಕಾಯ್ದೆ 1976 ಸೆಕ್ಷನ್ 175 ರಂತೆ ಅನುಮೋದನೆ ನೀಡಲು ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 12.05.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***08]. ವಿಷಯದ ಸಂಖ್ಯೆ: ತೆಆಸ್ಥಾಸ/15/2016–17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 29–04–2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಪಶ್ಚಿಮ ವಲಯದಲ್ಲಿ ವಾರ್ಡ್ ಸಂಖ್ಯೆ–95ರ ವ್ಯಾಪ್ತಿಯಲ್ಲಿ ಬರುವ ಸುಭಾಶ್‌ನಗರ, ಪ್ಲಾಟ್‌ಫಾರಂ ರಸ್ತೆಯಲ್ಲಿ ಬರುವ ಕೃಷ್ಣಫ್ಲೋರ್ ಮಿಲ್‌ಗೆ ಹೊಂದಿಕೊಂಡಂತೆ ಇರುವ 40401 ಚದರ ಅಡಿ ಖಾಲಿ ಜಾಗಕ್ಕೆ ಸಂಬಂಧಪಟ್ಟಂತೆ ಜಂಟಿ ಆಯುಕ್ತರು(ಪಶ್ಚಿಮ) ರವರು ಕಂಡಿಕೆ 38ರಲ್ಲಿ ಹಾಗೂ ಅಪರ ಆಯುಕ್ತರು (ಆಸ್ತಿಗಳು) ರವರು ಕಂಡಿಕೆ 106ರಲ್ಲಿ ಸಲ್ಲಿಸಿರುವ ವರದಿಗಳನ್ವಯ ಕಾನೂನು ಕೋಶದ ಮುಖ್ಯಸ್ಥರು ಕಂಡಿಕೆ 108 ರಿಂದ 126ರ ವರೆಗೆ ಸಲ್ಲಿಸಿರುವ ಅಭಿಪ್ರಾಯಕ್ಕೆ ಮಾನ್ಯ ಆಯುಕ್ತರು ಸೂಕ್ತ ಬಾಡಿಗೆಗೆ ಪ್ರಸ್ತಾವನೆ ಮಂಡಿಸಲು ಮತ್ತು ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿ ತಯಾರಿಸಿ ಸಲ್ಲಿಸಲು ಆದೇಶಿಸಿರುತ್ತಾರೆ.

ಆದರೆ ಈಗಾಗಲೇ ಬಾಡಿಗೆಯನ್ನು ಮಾಸಿಕ ರೂ.12,000/–ಗಳನ್ನು ನಿಗದಿಪಡಿಸಿ ರಾಜಾಜಿನಗರ ಉಪ ನೋಂದಾಣ ಅಧಿಕಾರಿಗಳ ಕಛೇರಿಯಲ್ಲಿ ನೋಂದಣಿ ಸಂಖ್ಯೆ: ಜಿಎಎನ್1–1–04769/2014–15 ಸಿಡಿನಂ. 224 ಆಗಿ ಗುತ್ತಿಗೆ ಕರಾರು ಪತ್ರ ನೋಂದಣಿಯಾಗಿರುತ್ತದೆ. ಅದರಂತೆ 15–09–2015ರಂದು ಸನ್ಮಾನ್ಯ ಮಾಜಿ ಪ್ರಧಾನ ಮಂತ್ರಿಗಳು ಹಾಗೂ ಜನತಾದಳ (ಜಾತ್ಯಾತೀತ) ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ. ಹೆಚ್.ಡಿ. ದೇವೇಗೌಡ ರವರು ಮಾನ್ಯ ಮಹಾಪೌರರಿಗೆ ಪತ್ರ ಬರೆದು ಹಾಲಿ ನೀಡಿರುವ 5 ವರ್ಷಗಳ ಗುತ್ತಿಗೆ ಅವಧಿಯನ್ನು 99 ವರ್ಷಗಳ ಅವಧಿಗೆ ವಿಸ್ತರಿಸಲು ಕೋರಿ ರಾಜ್ಯ ಸರ್ಕಾರಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಶಿಫಾರಸ್ಸು ಮಾಡಬೇಕೆಂದು ಕೋರಿಕೊಂಡಿರುವ ಹಿನ್ನೆಲೆಯಲ್ಲಿ ಪೂಜ್ಯ ಮಹಾಪೌರರು ಮೇಲ್ಕಂಡ ವಿಷಯದ ಬಗ್ಗೆ ಸಂಬಂಧಪಟ್ಟ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ಮುಂದೆ ಕೂಡಲೇ ಪ್ರಸ್ತಾವನೆಯನ್ನು ಮಂಡಿಸಲು ಜರೂರು ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಆಯುಕ್ತರಿಗೆ ದಿನಾಂಕ: 22.09.2015ರಂದು ಟಿಪ್ಪಣಿಯನ್ನು ಕಳಹಿಸಿಕೊಟ್ಟಿರುತ್ತಾರೆ.

ಪಶ್ಚಿಮ ವಲಯದಲ್ಲಿ ವಾರ್ಡ್ ಸಂಖ್ಯೆ–95ರ ವ್ಯಾಪ್ತಿಯಲ್ಲಿ ಬರುವ ಸುಭಾಶ್‌ನಗರ, ಪ್ಲಾಟ್‌ಫಾರಂ ರಸ್ತೆಯಲ್ಲಿ ಬರುವ ಕೃಷ್ಣಫ್ಲೋರ್ ಮಿಲ್‌ಗೆ ಹೊಂದಕೊಂಡಂತೆ ಇರುವ 40401 ಚದರ ಅಡಿ ಖಾಲಿ ಜಾಗಕ್ಕೆ ಮಾಸಿಕ

ರೂ.12,000/-(ಹನ್ನೆರಡು ಸಾವಿರಗಳು ಮಾತ್ರ)ಗಳ ಗುತಿಗೆ ಆಧಾರದ ಮೇಲೆ 5 ವರ್ಷಗಳಿಗೆ ನೀಡಿದ್ದು, ಸದರಿ ಅವಧಿಯನ್ನು 30 ವರ್ಷ, 33 ವರ್ಷ ಅಥವಾ 99 ವರ್ಷಗಳಿಗೆ ನಿಗಧಿಪಡಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ

ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಟಿಪ್ಪಣಿಯ ಮೇರೆಗೆ **"ಪ್ರಸ್ತಾಪಿತ ಪಾಲಿಕೆಯ ಆಸ್ತಿಯ ಸಂಖ್ಯೆ ಪಿ.ಐ.ಡಿ.ಸಂ: 26-39-19/1ರ ಗುತ್ತಿಗೆ ಅವಧಿಯನ್ನು 33 ವರ್ಷಗಳಿಗೆ ಮುಂದುವರೆಸಲು ಘನ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 03.05.2016ರ ಸಭೆಯ ನಿರ್ಣಯ."**

**ನಿರ್ಣಯ: ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 03.05.2016ರ ಸಭೆಯ ನಿರ್ಣಯವನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

***09]. ವಿಷಯದ ಸಂಖ್ಯೆ: ತೆಆಸ್ಥಾಸ/16/2016-17***

ಆಯುಕ್ತರ ದಿನಾಂಕ: 16.05.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಕಾರ್ಯದ ಒತ್ತಡ ಹೆಚ್ಚುವರಿ ಇರುವುದರಿಂದ ಇಲಾಖೆಯ ಕಾರ್ಯಗಳನ್ನು ನಿಗಧಿತ ಸಮಯದೊಳಗೆ ಪೂರ್ಣಗೊಳಿಸಲು ಸಾಧ್ಯವಾಗದ ಕಾರಣ ಹೆಚ್ಚುವರಿಯಾಗಿ ಐ.ಟಿ. ಕ್ಷೇತ್ರದಲ್ಲಿ ಪರಿಣಿತಿ ಹೊಂದಿರುವ ಮಾಹಿತಿ ತಂತ್ರಜ್ಞಾನ ಸಲಹೆಗಾರರ ಹುದ್ದೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಲು ವಿಶೇಷ ಆಯುಕ್ತರು (ಹಣಕಾಸು) ರವರು ಈ ಕೆಳಕಂಡ ಅಂಶಗಳೊಂದಿಗೆ ವರದಿಯನ್ನು ಸಲ್ಲಿಸಿರುತ್ತಾರೆ.

It is submitted that BBMP has one post of IT Advisor filled up. Sri.Sheshadri has been working as IT Advisor since last 7-8 years and has been contributing his best, in improving the IT infrastructure and solutions in the organization. With the developments in the filed of IT, BBMP, also needs to put in more inputs on improving the existing IT solutions and infrastructure. We need to use IT resources to streamline Administration, improve efficiency and bring transparency, so as to improve the public services being given by BBMP.

I have been in BBMP since almost 3 months and have been supervising finance and IT department. It is observed that due to increasing dependency on the software applications, by different departments, there is a huge workload and the entire burden comes on the IT Advisor to co-ordinate and resolve the issues. We also need to plan for the future and develop our systems, applications and infrasturucture to meet the requirements, well in advance. Currently, I am finding that the IT Advisor is over loaded with various responsibilities and hence the output of the works is getting delayed. Hence, I propose that we may appoint/hire one more IT Expert, as an IT Advisor, to support BBMP and the IT Department. We may fill up the post on out sourcing basis, by calling for applications from suitable candidates, for a period of 3 years, at a salary scale, which matches with the scale of the current IT Advisor. I believe there is provision of 2 posts of IT Advisor in BBMP, out of which one post is vacant.

In the context of above, I seek your kind approval for the appointment of one more IT Advisor, on outsource basis, to improve the performance of IT Department and also to have a redundancy, in case of the current IT advisor getting repatriated to parent department or proceeding of long leave, in case of exigencies. If approved, I suggest that the following qualifications be advertised for the post of IT Advisor.

1. A Bachelor degree in Engineering or Masters Degree Engineering from a recognized University established under the Law.
2. Must have atleast 10 years of experience in Systems and programming function in a large establishment including experience in designing, implementing and running large State Government Systems.
3. Thorough knowledge in Systems study, Systems Analysis, System Design, Programming and implementation including experience in implementing and running City Systems, Good knowledge in Geographical information system is also required.
4. Must be will versed with Architecting and conceptualizing large IT Systems. A thorough knowledge of latest trends in System Architecture like open source, APLs, Cloud, etc., is a must.
5. Must have ability to Program Manage large IT projects should be a mandatory skill.
6. Vendor/Contract management experience is also a must as most projects are outsourced.
7. Should have proven experience in implementation of end to end IT solutions
8. Strong Leadership skills with management experience of diverse workforce
9. Professional certifications is preferred like Oracle OCP/OCA certificates, CISCO/Microsoft certifications, programming language certifications, etc.,
10. Knowledge of Software, Hardware and Networking Management.
11. Should have good knowledge of at least two programming languages in use.
12. Must not be above the age of 55 years.
13. Must have good working knowledge of Kannada language.

**ಮಾಹಿತಿ ತಂತ್ರಜ್ಞಾನ ಸಲಹೆಗಾರರ ಹುದ್ದೆಗೆ ಈ ಕೆಳಕಂಡ ವಿದ್ಯಾರ್ಹತೆ ಮತ್ತು ಅನುಭವಗಳನ್ನು ನಿಗಧಿಪಡಿಸಬಹುದಾಗಿರುತ್ತದೆ.**

| Qualification Required | Experience Required |
|---|---|
| A Bachelor Degree in Engineer or A Masters Degree Engineering from a recognized University Established under the Law | Must have at least 10 years of experience in Systems and Programming function in a large establishment including experience in designing, implementing and running large State Government Systems. |
| Details of the projects should be furnished. | Thorough knowledge in Systems study, Systems Analysis, System Design, Programming and Implementation including |

| | |
|---|---|
| | experience in implementing and running city systems. Good knowledge in Geographical Information System is also required. |
| Details of the Projects executed to prove the experience required should be furnished | Must be well versed with Architecting and conceptualizing large IT Systems. Understanding of enterprise class GIS system is a must. A thorough knowledge of latest trends in System Architecture like Open source, APLs, Cloud etc is a must. |
| Brief description of the projects handled with the team size should be furnished. | Must have ability to Program Manage large IT projects should be a mandatory skill. |
| The roles and responsibilities carried out in various projects should be mentioned. | Vendor /Contract management experience is also a must as most projects are outsourced. |
| Minimum of 3 projects implementation (complete life cycle) is a must, details of the same should be furnished. | Should have proved experience in implementation of end to end IT solutions. |
| Projects with leadership roles and details should be furnished. | Strong Leadership skills with management experience of diverse workforce. |
| Data bases design, performance fine tuning and implementation and management skills are mandatory. | Professional certifications is preferred like Oracle OCP/OCA certificates, CISCO/Microsoft certifications, programming language certifications, etc., |
| Details of the expertise should be furnished. | Knowledge of software, hardware and Network Management. |
| Details should be provided. | Should have good knowledge of at least two programming languages in use. |
| Age Proof. | Must not be above the age of 55 years. |
| Self declaration should be furnished. | Must have good working knowledge of Kannada Language. |

The Salary may be fixed as consolidated pay of Rs.70,000/- per month.

ಈ ಸಂಬಂಧ ದಿನಾಂಕ: 15.02.2016ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಸಭೆಯ ವಿಷಯ ಸಂಖ್ಯೆ: 54/2015–16ರಲ್ಲಿ ಸದರಿ ಹುದ್ದೆಯನ್ನು ನೇರ ನೇಮಕಾತಿ ಮುಖೇನ ಭರ್ತಿ ಮಾಡುವ ಪ್ರಕ್ರಿಯೆ ಕೈಗೊಳ್ಳುವ ಷರತ್ತಿಗೊಳಪಡಿಸಿ, ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದ ಮೆಲೆ ನೇಮಕಾತಿ ಮಾಡಿಕೊಳ್ಳಲು ದಿನಾಂಕ: 08–01–2016ರ ಟಿಪ್ಪಣಿಯನ್ನು ಒಪ್ಪಿರುತ್ತಾರೆ. ಹಾಗೂ ದಿನಾಂಕ: 29.02.2016 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ವಿಷಯದ ಸಂಖ್ಯೆ: 01(290)/2015–16ರಲ್ಲಿ ಪ್ರಸ್ತಾಪಿತ ವಿಷಯದ ಕಡತವನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಕಳುಹಿಸುವುದೆಂದು ತೀರ್ಮಾನಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಕಾರ್ಯದ ಒತ್ತಡ ಹೆಚ್ಚುವರಿ ಇರುವುದರಿಂದ ಇಲಾಖೆಯ ಕಾರ್ಯಗಳನ್ನು ನಿಗಧಿತ ಸಮಯದೊಳಗೆ ಪೂರ್ಣಗೊಳಿಸಲು ಸಾಧ್ಯವಾಗದ ಕಾರಣ ಹೆಚ್ಚುವರಿಯಾಗಿ ಐ.ಟಿ ಕ್ಷೇತ್ರದಲ್ಲಿ ಪರಿಣಿತಿ ಹೊಂದಿರುವ ಮಾಹಿತಿ ತಂತ್ರಜ್ಞಾನ ಸಲಹೆಗಾರರ ಹುದ್ದೆಯನ್ನು ಹೊರಗುತ್ತಿಗೆ ಆಧಾರದ ಮೇಲೆ

ನೇಮಿಸುವ ಸಂಬಂಧ ಚರ್ಚಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ತೀರ್ಮಾನ ತೆಗೆದುಕೊಳ್ಳಲು ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 16.05.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***ಹೆಚ್ಚುವರಿ ವಿಷಯ:-***

***ವಿಷಯದ ಸಂಖ್ಯೆ: ತೆಆಸ್ಥಾಸ/17/2016-17***

ಆಯುಕ್ತರ ದಿನಾಂಕ: 25.05.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,

(1) ದಿನಾಂಕ:29-04-2016ರಂದು ನಡೆದ ಬೃಹತ್ ಬೆಂಗಳೂರು ಮಹಾನಗರದ ಪಾಲಿಕೆ ಸಭೆಯ ವಿಷಯ ಸಂಖ್ಯೆ:07/2016-17 ಈ ಕೆಳಕಂಡಂತೆ ತೀರ್ಮಾನಿಸಲಾಗಿರುತ್ತದೆ

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಯಂ ಘೋಷಣೆ ಆಸ್ತಿ ತೆರಿಗೆ ಪದ್ಧತಿಯನ್ನು ದಿನಾಂಕ:01-04-2008ರಿಂದ ಜಾರಿಗೆ ತರಲಾಗಿರುತ್ತದೆ. ಕಾಯ್ದೆ ಅನ್ವಯ ಪ್ರತಿ ಮೂರು ವರ್ಷಗಳಿಗೊಮ್ಮೆ ಕನಿಷ್ಠ ಶೇ.15ರಷ್ಟು ಹಾಗೂ ಗರಿಷ್ಠ ಶೇ.30ರಷ್ಟು ಪ್ರದೇಶವಾರು ಯೂನಿಟ್ ದರಗಳನ್ನು ಪರಿಷ್ಕರಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. 2008-09ನೇ ಸಾಲಿನಿಂದ 2015-16ನೇ ಸಾಲಿನವರೆಗೆ ಪ್ರತಿ ಮೂರು ವರ್ಷಗಳಂತೆ ಈಗಾಗಲೇ 3 ಬಾರಿ ಆಸ್ತಿ ತೆರಿಗೆ ಪರಿಷ್ಕರಣೆ ಕೈಗೊಳ್ಳಬೇಕಾಗಿದ್ದು, ಈ ತಹಲ್‌ವರೆಗೂ ಯಾವುದೇ ಪರಿಷ್ಕರಣೆ ಕೈಗೊಂಡಿರುವುದಿಲ್ಲ.

ದಿನಾಂಕ:11-08-2014ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಸಿತಿಯ ನಿರ್ಣಯದ ಸಂಖ್ಯೆ:ತೆಆಸ್ಥಾಸ/22/2014-15 ಮತ್ತು ಮಾನ್ಯ ಆಡಳಿತಗಾರರ ದಿನಾಂಕ:25-08-2015ರ ನಿರ್ಣಯದಂತೆ ಪ್ರದೇಶವಾರು ಯೂನಿಟ್ ದರಗಳನ್ನು ದಿನಾಂಕ:1/04/2016ರಿಂದ (2016-17) ಹೆಚ್ಚಿಸಲು ಹಾಗೂ ವಲಯ ವರ್ಗೀಕರಣವನ್ನು ಒಂದು ವಲಯ ಹೆಚ್ಚಳಕ್ಕೆ ಸೀಮಿತಗೊಳಿಸಿ, 2016-17ನೇ ಸಾಲಿಗೆ ಅಂದರೆ, ದಿನಾಂಕ: 1/04/2016ರಿಂದ ಜಾರಿಗೊಳಿಸಲು ತೀರ್ಮಾನಿಸಲಾಗಿರುತ್ತದೆ.

ಆಸ್ತಿ ತೆರಿಗೆ ಪರಿಷ್ಕರಣೆ ಹಾಗೂ ಪ್ರದೇಶವಾರು ಯೂನಿಟ್ ದರಗಳ ಜಾರಿಗೊಳಿಸಿದ ನಂತರ ಕೆಲವು ಪ್ರಕರಣಗಳಲ್ಲಿ ಕಳೆದ ಸಾಲಿನಲ್ಲಿ ಪಾವತಿಸಲಾಗಿರುವ ಮೊತ್ತಕ್ಕಿಂತ ಬಾರಿ ಪ್ರಮಾಣದಲ್ಲಿ ಹೆಚ್ಚುವರಿ ಆಗಿರುವ ಬಗ್ಗೆ ತೆರಿಗೆದಾರರರಿಂದ ಹಾಗೂ ಕ್ಷೇಮಾಭಿವೃದ್ಧಿ ಸಂಘಗಳಿಂದ ಅಸಮಧಾನ ವ್ಯಕ್ತಪಡಿಸುತ್ತಾ, ಆಸ್ತಿತೆರಿಗೆ ಕಡಿಮೆ ಮಾಡಲು ಕೋರಿರುತ್ತಾರೆ.

ತೆರಿಗೆದಾರರ ಹಾಗು ಪಾಲಿಕೆಯ ಆರ್ಥಿಕ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು "2016-17" ಸಾಲಿನಲ್ಲಿ ಪ್ರದೇಶವಾರು ಯೂನಿಟ್ ದರ ಹಾಗೂ ವಲಯ ವರ್ಗೀಕರಣದಂತೆ ಆಸ್ತಿ ತೆರಿಗೆಯನ್ನು ಲೆಕ್ಕಾಚಾರ ಮಾಡಿ, ನಂತರ ಲೆಕ್ಕಾಚಾರ ಮಾಡುವಾಗ ಈ ಹಿಂದಿನ ಸಾಲುಗಳಲ್ಲಿ ಪಾವತಿಸಲಾಗಿರುವ ಆಸ್ತಿ ತೆರಿಗೆಯ ಮೊತ್ತಕ್ಕಿಂತ ಹೆಚ್ಚುವರಿ ಮೊತ್ತವು ಲೆಕ್ಕಾಚಾರವಾಗಿದ್ದಲ್ಲಿ, ಹೆಚ್ಚುವರಿಯಾದ ಮೊತ್ತಕ್ಕೆ ವಸತಿಗೆ ಶೇ.20 ಮತ್ತು ಇತರೆ ಉಪಕರಗಳು ಹಾಗೂ ವಸತಿಯೇತರಕ್ಕೆ ಶೇ.25ರಷ್ಟು ತೆರಿಗೆ ಮತ್ತು ಇತರೆ ಉಪಕರಗಳನ್ನು ಸೇರಿಸಿ ಆಸ್ತಿತೆರಿಗೆಯನ್ನು ಮಿತಿಗೊಳಿಸಿ ಆಸ್ತಿ ತೆರಿಗೆ ಸ್ವೀಕರಿಸಲು ಹಾಗೂ 2016-17ನೇ ಸಾಲಿನಲ್ಲಿ ಪ್ರಸ್ತುತ ಜಾರಿಗೊಳಿಸಲಾಗಿರುವ ದರಗಳಂತೆ ಈಗಾಗಲೇ ಆಸ್ತಿ ತೆರಿಗೆ ಪಾವತಿಸಿರುವ ಪ್ರಕರಣಗಳಲ್ಲಿ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ಮುಂದಿನ ಆರ್ಥಿಕ

ವರ್ಷಗಳಲ್ಲಿ ಹೊಂದಾಣಿಕೆ ಮಾಡಿಕೊಂಡು ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ ಆಯುಕ್ತರು ಕ್ರಮವಹಿಸುವುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ".

(2) ಮುಂದುವರೆದಂತೆ, ನಗರ ಪಾಲಿಕೆಯ ನಿರ್ಣಯದಂತೆ ಸ್ವತ್ತಿನ ಉಪಯೋಗದಲ್ಲಿ ಬದಲಾವಣೆ ಇರುವ ಸ್ವತ್ತುಗಳು ಹಾಗು ಹೊಸದಾಗಿ ಸೇರ್ಪಡೆಗೊಂಡ ಸ್ವತ್ತುಗಳನ್ನು ಹೊರತುಪಡಿಸಿ ಉಳಿಕೆ ಸ್ವತ್ತುಗಳಿಗೆ ಆಸ್ತಿ ತೆರಿಗೆ ಪಾವತಿಸಲು ತಂತ್ರಾಂಶದಲ್ಲಿ ದಿನಾಂಕ: 05/05/2016 ರಿಂದ ಸೂಕ್ತ ತಿದ್ದುಪಡಿಯನ್ನು ತರಲಾಗಿರುತ್ತದೆ.

(3) ಶೇ.20 ರಿಂದ 25% capping ನೀಡಿರುವುದರಿಂದ ತೆರಿಗೆದಾರರು ಆನ್‌ಲೈನ್‌ನಲ್ಲಿ ಆಸ್ತಿ ತೆರಿಗೆ ಘೋಷಣೆಗಳನ್ನು ಸಲ್ಲಿಸುವ ಸಂಧರ್ಭದಲ್ಲಿ ಕೆಲವೊಂದು ಮಾರ್ಪಾಡುಗಳನ್ನು ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ. ಆದರೆ, ಈ ಹಿಂದಿನ ಸಾಲುಗಳಲ್ಲಿ ಖಾಲಿ ನಿವೇಶನವೆಂದು ಘೋಷಿಸಿಕೊಂಡು ಪ್ರಸ್ತುತ 2016-17ನೇ ಸಾಲಿನಲ್ಲಿ ಕಟ್ಟಡ ನಿರ್ಮಾಣವಾಗಿದ್ದಲ್ಲಿ ಅಥವಾ ಉಪಯೋಗದಲ್ಲಿ ಬದಲಾವಣೆ ಇರುವ ಪ್ರಕರಣಗಳಲ್ಲಿಯೂ ಸಹ ತೆರಿಗೆದಾರರು ಮಾರ್ಪಾಡುಗಳನ್ನು ಮಾಡಿಕೊಂಡು ಆಸ್ತಿ ತೆರಿಗೆ ಪಾವತಿಸುವ ಸಾಧ್ಯತೆಗಳಿರುತ್ತದೆ. ಪ್ರಸ್ತುತ ಆಸ್ತಿ ತೆರಿಗೆ ಲೆಕ್ಕಾಚಾರ ಮಾಡಿ ಒಟ್ಟಾರೆ ಮೊತ್ತಕ್ಕಿಂತ ಈ ಹಿಂದೆ ಪಾವತಿಸಲಾಗಿರುವ ಮೊತ್ತಕ್ಕೆ ಶೇಕಡವಾರು ಪರಿಗಣಿಸಿ 2016-17ನೇ ಸಾಲಿನ ಆಸ್ತಿ ತೆರಿಗೆಯು ಈ ಹಿಂದೆ ಪಾವತಿಸಿರುವ ಆಸ್ತಿ ತೆರಿಗೆ ಮೊತ್ತಕ್ಕೆ ಶೇ.20ರಷ್ಟು ಮಿತಿಗೊಳಿಸಿ ಆಸ್ತಿ ತೆರಿಗೆ ಲೆಕ್ಕಾಚಾರವಾಗಿರುತ್ತದೆ. ಇದರಿಂದ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗುತ್ತದೆ. ಆದಕಾರಣ ಇಂತಹ ಪ್ರಕರಣಗಳಲ್ಲಿಯೂ ಸಹ ಪಾಲಿಕೆಯ ನಿರ್ಣಯದಂತೆ ಹಿಂದಿನ ದರ (2008-16) ಹಾಗೂ ಈಗಿನ ದರ (2016 Onwards) ಎರಡನ್ನು ತಂತ್ರಾಂಶದಲ್ಲಿ ಲೆಕ್ಕಾಚಾರ ಮಾಡಿ ಈ ವರ್ಷ ಸ್ವತ್ತು ಮಾರ್ಪಾಡು ಮಾಡಿದ್ದಲ್ಲಿ ಅದಕ್ಕೆ ಸೇರ್ಪಡೆ ಮಾಡಿ ಪಾಲಿಕೆಯ ನಿರ್ಣಯದಂತೆ ಆಸ್ತಿ ತೆರಿಗೆ ಲೆಕ್ಕಾಚಾರ ಮಾಡಬೇಕಾಗಿದೆ.

(4) ಮುಂದುವರೆದಂತೆ ಏಪ್ರಿಲ್ ಮಾಹೆಯಲ್ಲಿ ವಲಯ ವರ್ಗೀರಣ ದರಗಳು ಪರಿಷ್ಕರಣೆಯಾಗುವುದರಿಂದ ಹೆಚ್ಚಳಕ್ಕೆ ವಿರೋದದಿಂದ ಹಾಗೂ ತಂತ್ರಾಂಶದ ಸಮಸ್ಯೆಗಳಿಂದ ಆಸ್ತಿ ತೆರಿಗೆ ಪಾವತಿ ಮಾಡುವ ನಾಗರೀಕರಲ್ಲಿ ಗೊಂದಲ ಉಂಟಾಗಿರುತ್ತದೆ. ಇದರಿಂದ ನಾಗರೀಕರಿಗೆ ಸುಲಭವಾಗಿ ಆಸ್ತಿ ತೆರಿಗೆ ಪಾವತಿಯಲ್ಲಿ ಹಿನ್ನೆಡೆ ಆಗಿದೆ.

(5) ಈ ಮಧ್ಯೆ ದಿನಾಂಕ: 29/04/2016ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2016-17 ಪರಿಷ್ಕರಣೆ ಆಗಿರುವ ಆಸ್ತಿ ತೆರಿಗೆಯ ಪಾವತಿ ಮೊತ್ತವನ್ನು ಶೇ.20 ಮತ್ತು 25ರಷ್ಟಕ್ಕೆ ಮಿತಿಗೊಳಿಸಿದ ಹಿನ್ನೆಲೆಯಲ್ಲಿ ಕೆಲವು ದಿನಗಳು ಯಾವುದೇ ರೀತಿಯ ಆಸ್ತಿ ತೆರಿಗೆ ಸ್ವೀಕರಿಸಲು ಸಾಧ್ಯವಾಗಿರುವುದಿಲ್ಲ. ಹಾಗೂ ಈ ನಿಟ್ಟಿನಲ್ಲಿ ಕಂಡಿಕೆ (3)ರಲ್ಲಿ ವಿವರಿಸಿದಂತೆ ತಂತ್ರಾಂಶದ ಸಂಪೂರ್ಣ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ.

(6) ಕಳೆದ ವರ್ಷ ಮೊದಲ ಎರಡು ತಿಂಗಳಲ್ಲಿ ಆಸ್ತಿ ತೆರಿಗೆಯನ್ನು ಪಾವತಿ ಮಾಡಿರುವ ನಾಗರೀಕರು ಸುಮಾರು 10,32,103 ಆಗಿದ್ದು, ಸುಮಾರು ರೂ.1086.00 ಕೋಟಿ ಆಸ್ತಿ ತೆರಿಗೆ ಸಂಗ್ರಹಣೆ ಆಗಿರುತ್ತದೆ. ಆದರೆ ಈ ವರ್ಷ 23/04/2016ರಿಂದ ಇದುವರೆಗೆ 502920 ತೆರಿಗೆದಾರರು ಆಸ್ತಿ ತೆರಿಗೆ ಪಾವತಿಸಿರುವುದು ರೂ.502.00 ಕೋಟಿ ಸಂಗ್ರಹವಾಗಿರುತ್ತದೆ.

(7) ಆದ್ದರಿಂದ ಈಗಾಗಲೇ ಮೇಲ್ಕಂಡಂತೆ ವಿವರಿಸಿರುವ ಸನ್ನಿವೇಶಗಳಿಂದ ಸಾರ್ವಜನಿಕರಲ್ಲಿ ಉಂಟಾಗಿರುವ ಗೊಂದಲವನ್ನು ನಿವಾರಿಸಲು ಶೇ.5ರಷ್ಟು ಆಸ್ತಿ ತೆರಿಗೆ ವಿನಾಯಿತಿ ಕಾಲಾವಧಿಯನ್ನು ದಿನಾಂಕ: 1/06/2016ರಿಂದ 30/06/2016ರವರೆಗೆ ವಿಸ್ತರಿಸಿ ಆದೇಶ ಹೊರಡಿಸಲು ಕೆ.ಎಂ.ಸಿ. ಕಾಯಿದೆ–1976ರಲ್ಲಿ ಪರಿಷ್ಕರಿಸಲು ಸರ್ಕಾರವನ್ನು ಕೋರಬಹುದಾಗಿದೆ.

(8) ಈಗಾಗಲೇ ಸರ್ಕಾರದಿಂದ ಎಲ್ಲಾ ವರ್ಷದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯ ನಿರ್ಣಯದಂತೆ ಆಸ್ತಿ ತೆರಿಗೆಯಲ್ಲಿ ಶೇ.5% ವಿನಾಯ್ತಿಯನ್ನು ದಿನಾಂಕ:31–05–2016ರವರೆಗೆ ವಿಸ್ತರಿಸಲಾಗಿರುತ್ತದೆ.

(9) ಪ್ರಸ್ತುತ ಕರ್ನಾಟಕ ಮುನಿಸಿಪಲ್ ಕಾಯ್ದೆ 1976ರ ಉಪ ನಿಯಮ 112(A) ರಡಿಯಲ್ಲಿ ಒಂದು ತಿಂಗಳ ಅವದಿಯೊಳಗೆ ಆಸ್ತಿ ತೆರಿಗೆಯನ್ನು ಶೇ.5 ರಷ್ಟು ರಿಯಾಯಿತಿಯೊಂದಿಗೆ 1ನೇ ಏಪ್ರಿಲ್ ನಿಂದ 30ನೇ ಏಪ್ರಿಲ್‌ವರೆಗೆ ಪಾವತಿಸಲು ಅವಕಾಶವಿರುತ್ತದೆ. ಆದರೆ, ಒಂದು ತಿಂಗಳ ನಂತರ ಶೇ.5ರ ರಿಯಾಯಿತಿ ಅವಧಿಯನ್ನು ವಿಸ್ತರಿಸುವ ಬಗ್ಗೆಯಾಗಲೀ ಅಥವಾ ವಿಸ್ತರಿಸಲು ಅವಕಾಶವಿಲ್ಲದಿರುವ ಬಗ್ಗೆಯಾಗಲೀ ಯಾವುದೇ ರೀತಿಯ ಉಲ್ಲೇಖವಿರುವುದಿಲ್ಲ.

(10) ಮುಂದುವರೆದಂತೆ ಕರ್ನಾಟಕ ಮುನಿಸಿಪಲ್ ಕಾಯ್ದೆ 1976ರ ನಿಯಮ 509 ರಲ್ಲಿ ಈ ರೀತಿ ಇರುತ್ತದೆ.
Removal of difficulties:- If any difficulty arises in giving effect to the provisons of this Act, the Government may, by order published in the Official Gazette as the occasion may require do anything which appears to it to be necessary to remove the difficulty.

2016–17ನೇ ಸಾಲಿನಲ್ಲಿ ಇನ್ನೂ ಸಮಾರು 11.00 ಲಕ್ಷ ತೆರಿಗೆದಾರರು ಆಸ್ತಿ ತೆರಿಗೆಯನ್ನು ಪಾವತಿಸಬೇಕಾಗಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಶೇ.5ರಷ್ಟರ ರಿಯಾಯಿತಿಯನ್ನು 1ನೇ ಜೂನ್ 2016 ರಿಂದ 30ನೇ ಜೂನ್ 2016 ರವರೆಗೆ ವಿಸ್ತರಿಸಿ ಆದೇಶ ಹೊರಡಿಸಲು ಸರ್ಕಾರವನ್ನು ಕೋರುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ:–***

1. ***ಹೊಸದಾಗಿ ಕಟ್ಟಡ ನಿರ್ಮಾಣವಾಗಿರುವ ಪ್ರಕರಣಗಳಲ್ಲಿ ಹಾಗೂ ಸ್ವತ್ತಿನ ಉಪಯೋಗದಲ್ಲಿ ಬದಲಾವಣೆ ಆಗಿರುವ ಪ್ರಕರಣಗಳಲ್ಲಿ ಈ ಹಿಂದಿನ ಪ್ರದೇಶವಾರು ಯೂನಿಟ್ ದರ ಹಾಗೂ ವಲಯ ವರ್ಗೀಕರಣದಂತೆ (2008–16) ಮತ್ತು ಪ್ರಸ್ತುತ ಸಾಲಿನ ಪ್ರದೇಶವಾರು ಯೂನಿಟ್‌ದರ ಹಾಗೂ ವಲಯ ವರ್ಗೀಕರಣದಂತೆ (2016 ) ತಂತ್ರಾಂಶದಲ್ಲಿ ಲೆಕ್ಕಾಚಾರ ಮಾಡಿರುವ ಆಸ್ತಿತೆರಿಗೆ ಮೊತ್ತವನ್ನು ತಾಳೆ ಮಾಡಿ ವಸತಿಗೆ ಶೇ.20ರಷ್ಟು ವಸತಿಯೇತರಕ್ಕೆ ಶೇ.25ರಷ್ಟು ಹಾಗೂ ಇತರೆ ಉಪಕರಗಳನ್ನು ಸೇರಿಸಿ ಆಸ್ತಿ ತೆರಿಗೆಯನ್ನು ಮಿತಿಗೊಳಿಸಿ ಸ್ವೀಕರಿಸುವುದು.***

2. ***ಆಸ್ತಿತೆರಿಗೆ ಏರಿಕೆಯನ್ನು ಶೇ.20 ಹಾಗೂ ಶೇ.25ರಷ್ಟು ಮಿತಿಗೊಳಿಸುವ ತಿದ್ದುಪಡಿ ಅನುಷ್ಠಾನ ಮೇ 5ರಲ್ಲಿ ಸಾಧ್ಯವಾಗಿದ್ದು, ಜೊತೆಗೆ ಹೊಸ ಪದ್ಧತಿಯ ಬಗ್ಗೆ ಹಲವಾರು ಗೊಂದಲದಿಂದ ತೆರಿಗೆ ಪಾವತಿದಾರರಿಗೆ ಅನೇಕ ದಿನಗಳು ಕಡಿತವಾದ ಕಾರಣವನ್ನು ಪರಿಗಣಿಸಿ ರಿಯಾಯಿತಿ ಅವಧಿಯನ್ನು ಜೂನ್ 30, 2016ರ ವರೆಗೆ ವಿಸ್ತರಿಸುವ ಆಯುಕ್ತರ ದಿನಾಂಕ: 25.05.2016ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿತು.***

***ವಿಷಯದ ಸಂಖ್ಯೆ: ತೆಆಸ್ಥಾಸ/18/2016-17***

ಆಯುಕ್ತರ ದಿನಾಂಕ: 26.05.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,

1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಅಳವಡಿಸಿಕೊಂಡಿರುವ ಕೆ.ಎಂ.ಸಿ ಕಾಯ್ದೆ ಹಾಗೂ ಅದರಿಂದ ರಚಿಸಲ್ಪಟ್ಟ ಜಾಹೀರಾತು ಉಪವಿಧಿಗಳಲ್ಲಿ ವಿವಿಧ ರೀತಿಯ ಜಾಹೀರಾತು ಪ್ರದರ್ಶನಗಳಿಗೆ ತೆರಿಗೆ ವಿಧಿಸಿ ಅನುಮತಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಆದರೆ, ಆಯುಕ್ತರವರ ಆದೇಶದ ಅನುಸಾರ ಪಾಲಿಕೆಯ ವ್ಯಾಪ್ತಿಯಲ್ಲಿ ಹೊಸದಾಗಿ ವಾಣಿಜ್ಯ ಜಾಹೀರಾತು ಫಲಕಗಳನ್ನು ಅಳವಡಿಸಲು ಅನುಮತಿ ನೀಡಬಾರದೆಂದು ನಿರ್ಣಯಿಸಲಾಗಿರುತ್ತದೆ.

2) ತದನಂತರ, ಆಯುಕ್ತರವರ ಆದೇಶದಂತೆ ಪಾಲಿಕೆಯ ವ್ಯಾಪ್ತಿಯಲ್ಲಿ ಯಾವುದೇ ಹೊಸ ಸ್ವ-ಜಾಹೀರಾತು ಫಲಕಗಳಿಗೆ ಅನುಮತಿ ನೀಡಬಾರದೆಂದು ತಿಳಿಸಿರುತ್ತಾರೆ.

3) ಅನಂತರದಲ್ಲಿ ಪಾಲಿಕೆಯ ಸಭೆಯಲ್ಲಿ ಎಲ್ಲಾ ರೀತಿಯ ಜಾಹೀರಾತುಗಳನ್ನು ನಿಷೇದಿಸಲು ನಿರ್ಣಯಿಸಿರುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

4) ಮುಂದುವರೆದು, ಮಾನ್ಯ ಆಡಳಿತಗಾರರು ದಿನಾಂಕ: 22-06-2015 ರಂದು ವಿಷಯದ ಸಂಖ್ಯೆ:103/ 2015-16ರಲ್ಲಿ ಪಾಲಿಕೆಯ ವ್ಯಾಪ್ತಿಯಲ್ಲಿ ಎಲ್ಲಾ ರೀತಿಯ ಜಾಹೀರಾತುಗಳನ್ನು ನಿಷೇದಿಸುವಂತೆ ಸರ್ಕಾರಕ್ಕೆ ಸಲ್ಲಿಸಲಾದ ಕೌನ್ಸಿಲ್ ಸಭೆಯ ನಿರ್ಣಯವನ್ನು ರದ್ದುಪಡಿಸಲು ಮತ್ತು ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಅನಧಿಕೃತ ಜಾಹೀರಾತುಗಳನ್ನು ತಕ್ಷಣ ತೆರವುಗೊಳಿಸುವ ಬಗ್ಗೆ ಹಾಗೂ ಅಧಿಕೃತ ಜಾಹೀರಾತುಗಳ ಬಗ್ಗೆ ಹಾಲಿ ಇರುವ ಬೈಲಾಗಳಂತೆ ಕ್ರಮವಹಿಸುವ ಬಗ್ಗೆ ಸೂಕ್ತ ತೀರ್ಮಾನ ತೆಗೆದುಕೊಂಡ ನಿರ್ಣಯವನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿದ್ದು, ಸದರಿ ನಿರ್ಣಯವನ್ನು ಸರ್ಕಾರವು ಒಪ್ಪಿ ದಿನಾಂಕ: 25.08.2015 ರಂದು ಅನುಮೋದನೆಯನ್ನು ನೀಡಲಾಗಿರುತ್ತದೆ.

5) ಅಂತೆಯೇ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಮಾನ್ಯ ಆಡಳಿತಗಾರರು ದಿನಾಂಕ:10-09-2015 ರಂದು ವಿಷಯದ ಸಂಖ್ಯೆ:201/2015-16ರಲ್ಲಿ ಈ ಕೆಳಕಂಡಂತೆ ತೀರ್ಮಾನ ತೆಗೆದುಕೊಳ್ಳಲಾಗಿರುತ್ತದೆ.

> **"2008 ರಿಂದ ಬೆಂಗಳೂರಿನ ಜನಸಂಖ್ಯೆ ಹಾಗೂ ಹೊಸ ಪ್ರದೇಶಗಳ ವ್ಯಾಪ್ತಿಯಲ್ಲಿ ಸಾಕಷ್ಟು ಹೆಚ್ಚಾಗಿದೆ. ವಾಣಿಜ್ಯ ವಹಿವಾಟುಗಳು ಸಹ ಹೆಚ್ಚಾಗಿದೆ. ಈ ಹಿನ್ನಲೆಯಲ್ಲಿ ಜಾಹೀರಾತು ಬೈಲಾ 2006ರಲ್ಲಿ ಕಲ್ಪಿಸಿರುವ ಅವಕಾಶ ಹಾಗೂ ನಿಬಂಧನೆಗಳಿಗೆ ಒಳಪಟ್ಟು ಹೊಸ ಜಾಹೀರಾತುಗಳ ಪರವಾನಗಿ ನೀಡುವುದರಿಂದ ಪಾಲಿಕೆಗೆ ಆದಾಯ ಹೆಚ್ಚಾಗುತ್ತದೆ. ಅನಧಿಕೃತ ಜಾಹೀರಾತುಗಳನ್ನು ಕಡಿಮೆಗೊಳಿಸಬಹುದಾಗಿದೆ. ಜಾಹೀರಾತು ಬೈಲಾ 2006ರಲ್ಲಿ ಅವಕಾಶವಿರುವಂತೆ. ಅದರ ನಿಬಂಧನೆಗಳಿಗೆ ಒಳಪಟ್ಟು ಪಾಲಿಕೆಯ ವ್ಯಾಪ್ತಿಯಲ್ಲಿನ ಎಲ್ಲಾ 8 ವಲಯಗಳಲ್ಲಿ ಎಲ್ಲಾ ರೀತಿಯ ಜಾಹೀರಾತುಗಳನ್ನು ಅಳವಡಿಸಲು ಹೊಸದಾಗಿ ಅನುಮತಿ ನೀಡಲು ಹಾಗೂ ಹಾಲಿ ಪಾಲಿಕೆ ವ್ಯಾಪ್ತಿಯಲ್ಲಿರುವ ಅನಧಿಕೃತ ಜಾಹೀರಾತುಗಳಿಗೆ ಹಾಲಿ ಇರುವ ಅಳತೆಗೆ ತಕ್ಕಂತೆ ಜಾಹೀರಾತು ಅಳವಡಿಸಿದ ದಿನಾಂಕದಿಂದ ಇಲ್ಲಿಯವರೆಗೆ ದಂಡ ವಿಧಿಸಿ, ಅನಧಿಕೃತ ಅಳತೆಯ ಜಾಹೀರಾತುಗಳನ್ನು ತೆರವುಗೊಳಿಸಲಾಗುವುದು ಹಾಗೂ ಜಾಹೀರಾತು ಬೈಲಾ 2006ರ ಪ್ರಕಾರ ಅನುಮತಿಸಿರುವ ಅಳತೆಯಂತೆ ಫಲಕ ಅಳವಡಿಸಲು ಹೊಸದಾಗಿ ಎಲ್ಲಾ ರೀತಿಯ ಜಾಹೀರಾತುಗಳಿಗೆ ಅನುಮತಿ ನೀಡಲು ಅನುಮೋದಿಸಿದೆ".**

6) ತದನಂತರದಲ್ಲಿ ಈ ಹಿಂದೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅನುಮತಿ ಪಡೆದಿರುವ ಜಾಹೀರಾತು ಫಲಕಗಳ ಅನುಮತಿ ನವೀಕರಣಕ್ಕಾಗಿ ಆಗಸ್ಟ್-2015 ರಲ್ಲಿ ಆನ್‌ಲೈನ್ ತಂತ್ರಾಂಶದ

ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಒಟ್ಟು 1423 ಅರ್ಜಿಗಳು ಬಂದಿರುತ್ತವೆ. ಅವುಗಳನ್ನು ನಿಯಮಾನುಸಾರ ವಿಲೇವಾರಿ ಕೆಲಸ ಸಹಯಕ ಕಂದಾಯ ಅಧಿಕಾರಿ, ಉಪ ಆಯುಕ್ತರು ಮತ್ತು ವಲಯ ಜಂಟಿ ಆಯುಕ್ತರ ಹಂತದಲ್ಲಿ ನಡೆಸಲಾಗುತ್ತಿದೆ. ಇದುವರೆಗೂ ಆನ್‌ಲೈನ್ ತಂತ್ರಾಂಶದಲ್ಲಿ 83 ಜಾಹೀರಾತು ಫಲಕಗಳಿಗೆ ನವೀಕರಣಕ್ಕಾಗಿ ಅನುಮತಿ ನೀಡಲಾಗಿದ್ದು, 625 ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಉಳಿದಂತೆ ಸುಮಾರು 715 ಅರ್ಜಿಗಳು ಪರಿಶೀಲನಾ ಹಂತದಲ್ಲಿರುತ್ತವೆ.

7) ಮುಂದುವರೆದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಜಾಹೀರಾತು ವಿಭಾಗದಿಂದ ಬರುತ್ತಿರುವ ವಾರ್ಷಿಕ ಆದಾಯ ಈ ರೀತಿ ಇದೆ.

| ಕ್ರಮ ಸಂಖ್ಯೆ | ಅವಧಿ | ಸಂಗ್ರಹಿಸಿದ ತೆರಿಗೆ ಮೊತ್ತ ರೂ. ಕೋಟಿಗಳಲ್ಲಿ |
|---|---|---|
| **1** | **2010–11** | **12.96** |
| **2** | **2011–12** | **32.20** |
| **3** | **2012–13** | **22.76** |
| 4 | **2013–14** | **35.27** |
| 6 | **2014–15** | **21.47** |
| **7** | **2015–16** | **6.19** |

8) 2014–15 ಮತ್ತು 2015–16ನೇ ಸಾಲಿನಲ್ಲಿ ಜಾಹೀರಾತು ತೆರಿಗೆ ಮತ್ತು ದಂಡ ಸಂಗ್ರಹಣೆಯಲ್ಲಿ ಹಿನ್ನಡೆ ಕಂಡಿದ್ದು, ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರದರ್ಶನವಾಗುತ್ತಿರುವ ಅನಧಿಕೃತ ಜಾಹಿರಾತು ಫಲಕಗಳಿಂದ ಮತ್ತು ಸರ್ಕಾರಿ ಸಂಸ್ಥೆಗಳಲ್ಲಿ ಅನುಮತಿ ಅನ್ವಯ ಪ್ರದರ್ಶನವಾಗುತ್ತಿರುವ ಜಾಹೀರಾತು ಫಲಕಗಳಿಂದ ಸಹ ಪಾಲಿಕೆಗೆ ಸಾಕಷ್ಟು ಆದಾಯ ಸೋರಿಕೆಯಾಗಿರುತ್ತದೆ. ಇದಲ್ಲದೆ ಅಧಿಕೃತ ಜಾಹೀರಾತು ಫಲಕಗಳಿಗಿಂತ ಅನಧಿಕೃತ ಫಲಕಗಳೇ ಹೆಚ್ಚಾಗಿರುತ್ತವೆ.

9) 2010 ರಿಂದ 2016ರ ವರೆಗೆ ಜಾಹೀರಾತು ವಿಷಯಕ್ಕೆ ಸಂಬಂಧಿಸಿದಂತೆ, ಪಾಲಿಕೆ ವ್ಯಾಪ್ತಿಯಲ್ಲಿ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳ ವಿವರ ಈ ಕೆಳಕಂಡಂತ್ತಿದೆ.

| Sl. No. | Particulars | No. of Cases | Parawisie Remarks | | Interim Order | | |
|---|---|---|---|---|---|---|---|
| | | | Received | Not Received | Granted | Not-Granted | Status quo |
| 1 | OS | 182 | 73 | 109 | 38 | 144 | 7 |
| 2 | WP | 38 | 7 | 31 | 23 | 15 | 0 |
| 3 | RFA | 2 | 0 | 2 | 0 | 2 | 0 |
| 4 | MFA | 1 | 0 | 1 | 0 | 1 | 0 |
| 5 | Execution | 1 | 0 | 1 | 0 | 1 | 0 |
| 6 | Arbitration | 1 | 1 | 0 | 0 | 1 | 0 |
| 7 | Arbitration Suit | 1 | 0 | 1 | 0 | 1 | 0 |
| 8 | Arbitration Appeal | 1 | 0 | 1 | 1 | 0 | 0 |
| | **Total** | **227** | **81** | **146** | **62** | **165** | **7** |

2010 ರಿಂದ 2016ರ ವರೆಗೆ ಒಟ್ಟಾರೆ 227 ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ. ಸದರಿ ದಾವೆಗಳಿಗೆ ಸಂಬಂಧಿಸಿದಂತೆ ಹಲವು ಪ್ರಕರಣಗಳಲ್ಲಿ ಕಂಡಿಕೆವಾರು ಉತ್ತರವನ್ನು ಸಲ್ಲಿಸಬೇಕಾಗಿರುತ್ತದೆ

ಹಾಗೂ 62 ಪ್ರಕರಣಗಳಲ್ಲಿ ಮಧ್ಯಂತರ ಆದೇಶ ಹೊರಡಿಸಿದ್ದು, ಹಲವು ಪ್ರಕರಣಗಳಲ್ಲಿ ಹಲವಾರು ವರ್ಷಗಳಿಂದ ಯಥಾಸ್ಥಿತಿ ಮುಂದುವರೆದಿದ್ದು ನ್ಯಾಯಾಲಯದಲ್ಲಿ ಬಾಕಿ ಇರುವುದರಿಂದ ಪಾಲಿಕೆಗೆ ಆರ್ಥಿಕವಾಗಿ ನಷ್ಟ ಉಂಟಾಗಿರುತ್ತದೆ. ಡೀಮ್ಡ್ ಅನುಮತಿ ಆಗಿರುವ ನೆಪದಲ್ಲಿ ಬಿಟ್ಟಿರುವ ಈ ಜಾಹೀರಾತು ಫಲಕಗಳಿಂದ ಪಾಲಿಕೆಗೆ ಬರಬೇಕಾಗಿರುವ ಬಾಕಿ ಜಾಹೀರಾತು ತೆರಿಗೆ ಮತ್ತು ದಂಡವನ್ನು ವಸೂಲು ಮಾಡಲು ಕೂಡಲೇ ಕ್ರಮ ಜರುಗಿಸಬೇಕಾಗಿರುತ್ತದೆ.

ಪಾಲಿಕೆಯ ವ್ಯಾಪ್ತಿಯಲ್ಲಿ ಈಗ ಇರುವ ಜಾಹೀರಾತು ಫಲಕಗಳನ್ನು ಈ ಕೆಳಕಂಡ ಪ್ರಮುಖ ವರ್ಗಗಳಲ್ಲಿ ಗುರುತಿಸಬಹುದಾಗಿರುತ್ತದೆ:–

- ಈ ಹಿಂದೆ ಜಾಹೀರಾತು ಫಲಕಗಳ ಪ್ರದರ್ಶಿಸಲು ಪರವಾನಗಿ ನೀಡಿರುವ 2297 ಜಾಹೀರಾತುಗಳು (ವಲಯಗಳ ಜಂಟಿ ಆಯುಕ್ತರ ಮಾಹಿತಿಯಂತೆ) ಇದರಲ್ಲಿ 2016–17 ರ ತಂತ್ರಾಂಶದಲ್ಲಿ ಕೇವಲ 83 ಜಾಹೀರಾತು ಫಲಕಗಳ ನವೀಕರಣವಾಗಿರುತ್ತದೆ.
- ಪಾಲಿಕೆಯಿಂದ ಈ ಹಿಂದೆ ಯಾವುದೇ ರೀತಿ ಪರವಾನಗಿ ಪಡೆಯದೆ ಅನಧಿಕೃತವಾಗಿರುವ ಜಾಹೀರಾತು ಪ್ರದರ್ಶಿಸುತ್ತಿರುವ ಜಾಹೀರಾತು ಫಲಕಗಳು.

ಮೇಲಿನಂತೆ ಸವಿಸ್ತಾರವಾಗಿ ವಿವರಿಸಿರುವ ಎಲ್ಲಾ ಅಂಶಗಳು ಪಾಲಿಕೆಯ ಸಂಪನ್ಮೂಲವನ್ನು ಹೆಚ್ಚಿಸಲು ಪೂರಕವಾಗಿದ್ದು, ಅಂದಾಜಿಸಲಾದ ರೂ.150 ಕೋಟಿಗಳಿಗಿಂತ ಹೆಚ್ಚು ತೆರಿಗೆಯಲ್ಲಿ ಮತ್ತು ದಂಡದಲ್ಲಿ ಕನಿಷ್ಠ 2016–17ನೇ ಸಾಲಿನ ಆಯಾ–ವ್ಯಯದಲ್ಲಿ ನಿರೀಕ್ಷಿಸಿದಷ್ಟು ಜಾಹೀರಾತು ತೆರಿಗೆ ರೂ.140.00 ಕೋಟಿಯಷ್ಟು ವಸೂಲಾತಿ ಮಾಡುವ ಗುರಿ ತಲುಪುವುದರಲ್ಲಿ ಯಾವುದೇ ಸಂದೇಹವಿಲ್ಲ ಎಂಬ ಅಂಶಗಳನ್ನು ಮಾನ್ಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಆಧ್ಯ ಗಮನಕ್ಕೆ ತರುತ್ತಾ, ಕೆಳಕಂಡ ವಿಷಯಗಳಿಗೆ ಅನುಮೋದನೆ ಕೋರಿದೆ.

1. ಎಲ್ಲಾ ಜಾಹೀರಾತು ಫಲಕಗಳ ವಿವರಣೆಯನ್ನು ಛಾಯ ಚಿತ್ರಗಳೊಂದಿಗೆ Google map location ನಲ್ಲಿ ಒಳಗೊಂಡಂತೆ ಈಗಾಗಲೇ ಸಿದ್ದಪಡಿಸಿರುವ ತಾಂತ್ರಾಂಶದಲ್ಲಿ ಅಳವಡಿಸಿ ಈಗಾಗಲೇ ಹಲವು ವಲಯಗಳಲ್ಲಿ ಪ್ರಾರಂಭವಾಗಿರುವ ದಂಡ ವಸೂಲಾತಿ ಕ್ರಮದಂತೆ ದಂಡ ವಸೂಲಾತಿ ನೋಟಿಸ್ ಜಾರಿ ಮಾಡಿರುವ ಹಾಗೂ ಜಾರಿ ಮಾಡುವ ಎಲ್ಲಾ ಅನಧಿಕೃತ ಫಲಕಗಳ ಪ್ರತಿ ವರ್ಷದಂತೆ ದಂಡ ವಸೂಲಾತಿಗೆ ನಿಯಮಾನುಸಾರ ಕ್ರಮ ತೆಗೆದುಕೊಂಡು ಹಾಗೂ ತೆರವುಗೊಳಿಸಿ ಬಿಎಂಟಿಎಫ್‌ನಲ್ಲಿ ದೂರು ದಾಖಲಿಸಲು.

2. ಈ ಹಿಂದೆ ಅನುಮತಿ ಪಡೆದಿರುವ ಜಾಹೀರಾತು ಫಲಕಗಳಿಂದ ಪಾಲಿಕೆಗೆ ತೆರಿಗೆ ಮತ್ತು ದಂಡ ಬಾಕಿ ಉಳಿಸಿಕೊಂಡಿರುವ ಜಾಹೀರಾತು ತೆರಿಗೆಯನ್ನು ಎಷ್ಟು ವರ್ಷಗಳ ಅವಧಿಯವರೆಗೆ ವಸೂಲಾತಿ ಮಾಡಲು ಬೈಲಾನಲ್ಲಿ ನಿರ್ದೇಶನ ಇಲ್ಲದ ಕಾರಣ ಕೆ.ಎಂ.ಸಿ ಕಾಯ್ದೆಯಲ್ಲಿ ಅಳವಡಿಸಿಕೊಂಡಿರುವ ಆಸ್ತಿ ತೆರಿಗೆ ಮಾದರಿಯಲ್ಲಿ ಏಳು ವರ್ಷಗಳ ಅವಧಿಯವರೆಗೆ ಬಾಕಿ ವಸೂಲಿ ಮಾಡಲು ಅನುಮತಿ.

3. ಈ ಹಿಂದೆ ಅನುಮತಿ ಪಡೆದಿರುವ 2297 ಜಾಹೀರಾತುದಾರರು ಕಳೆದ ವರ್ಷ ನವೀಕರಣವಾಗಿರುವ 83ನ್ನು ಒಳಗೊಂಡಂತೆ ತೆರಿಗೆ ಮತ್ತು ದಂಡ ಪಾವತಿಸಲು ಬಾಕಿ ಉಳಿಸಿಕೊಂಡು ಅನಧಿಕೃತವಾಗಿ ಪ್ರದರ್ಶಿಸುತ್ತಿರುವ ಜಾಹೀರಾತುಗಳಿಗೆ ವಿಧಿಸುವ ದಂಡ ಮತ್ತು ಬಾಕಿ ತೆರಿಗೆ ಮೊತ್ತವನ್ನು ಜಾಹೀರಾತುದಾರರು ಪೂರ್ಣವಾಗಿ ಪಾಲಿಕೆಗೆ ಪಾವತಿಸಿದ್ದಲ್ಲಿ, ಅಂತಹ ಜಾಹೀರಾತು ಫಲಕಗಳಿಗೆ ಬೈಲಾ ಉಪವಿಧಿಗಳ ಪ್ರಕಾರ ನಿಯಮಾನುಸಾರ ನವೀಕರಣಕ್ಕಾಗಿ ತಾಂತ್ರಾಂಶದಲ್ಲಿ (ಆನ್‌ಲೈನ್) ಅರ್ಜಿ ಸಲ್ಲಿಸುವ ಅವಕಾಶ ಕಲ್ಪಿಸುವ ಬಗ್ಗೆ ಅನುಮತಿ.

4. ಜಾಹೀರಾತು ಬೈಲಾ ಉಪ ವಿಧಿ 3ಎ(7)ರಂತೆ ಯಾವುದೇ ಅನಧಿಕೃತ ಜಾಹೀರಾತಿಗೆ ನಿರ್ದಿಷ್ಟಪಡಿಸಿದ ಪ್ರಮಾಣದಲ್ಲಿ ದಂಡ ವಿಧಿಸಲು ಕಾರಣವಾಗುತ್ತದೆ. ಎಲ್ಲಾ ವಿಧದ ಜಾಹೀರಾತುಗಳಿಗೆ ಸಂಬಂಧಪಟ್ಟಂತೆ, ಯಾವುದೇ ರೀತಿಯ ಉಲ್ಲಂಘನೆ ಕಂಡುಬಂದಲ್ಲಿ, ಆಯುಕ್ತರು ಅನ್ವಯವಾಗುವ ವಾರ್ಷಿಕ ಜಾಹೀರಾತು ಶುಲ್ಕಕ್ಕೆ ಮೀರದಂತೆ ಗರಿಷ್ಠ ದಂಡವನ್ನು ವಿಧಿಸಿ ನಿಯಮಾನುಸಾರ ತೆರವುಗೊಳಿಸಿ ಬಿ.ಎಂಟಿ.ಎಫ್‌ನಲ್ಲಿ ದೂರು ದಾಖಲಿಸಲು ಅನುಮತಿ.
5. ನ್ಯಾಯಾಲಯಗಳಲ್ಲಿ ಬಾಕಿ ಇರುವ ಎಲ್ಲಾ ಪ್ರಕರಣಗಳಲ್ಲಿ ಡೀಮ್ಡ್ ಅನುಮತಿ ಆಗಿರುವ ನೆಪದಲ್ಲಿ ಬಿಟ್ಟಿರುವ ಈ ಜಾಹೀರಾತು ಫಲಕಗಳಿಂದ ಪಾಲಿಕೆಗೆ ಬರಬೇಕಾಗಿರುವ ಬಾಕಿ ಜಾಹೀರಾತು ತೆರಿಗೆ ಮತ್ತು ದಂಡವನ್ನು ವಸೂಲು ಮಾಡಲು ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

ಈ ಮೇಲಿನ ವಿಷಯಗಳಿಗೆ ಸಂಬಂಧಿಸಿದಂತೆ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

*ನಿರ್ಣಯ:–*

1. *ಪಾಲಿಕೆಯ ಜಾಹೀರಾತು ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದು ನಿಯಮಾನುಸಾರ ನವೀಕರಣ ಮಾಡುವುದು.*
2. *ಹಿಂದಿನ ಅನಧೀಕೃತ ಜಾಹೀರಾತು ಪ್ರದರ್ಶಿಸಿದ ಸಮಯಕ್ಕೆ ದಂಡ + ಶುಲ್ಕ ವಸೂಲಾತಿ ಮಾಡಿದ ನಂತರವೇ ನವೀಕರಣಕ್ಕೆ ಅನುಮತಿ ನೀಡುವುದು.*
3. *ಒಂದು ವೇಳೆ ನಿಯಮ ಉಲ್ಲಂಘಿಸಿ ಜಾಹೀರಾತಿನ ಫಲಕದ ಅಗಲ, ಎತ್ತರ ಮತ್ತು ಪ್ರದೇಶದಲ್ಲಿ ಅಳವಡಿಸಿದಲ್ಲಿ ಅಂತಹ ಸಂಸ್ಥೆಯ ಮೇಲೆ ಕ್ರಿಮಿನಲ್ ಮೊಕದ್ದಮೆ ಜೋತೆಗೆ ಜಾಹೀರಾತು ಪ್ರಚುರ ಪಡಿಸಿರುವ ಸಂಸ್ಥೆಯ ಮೇಲೂ ಸಹ ಮೊಕ್ಕದ್ದಮೆ ದಾಖಲಿಸುವುದು.*
4. *ಕಡ್ಡಾಯವಾಗಿ ಆನ್‌ಲೈನ್ ನೊಂದಣಿ + ಫಲಕಗಳ ಛಾಯಚಿತ್ರ, ಉದ್ದ, ಅಗಲಗಳನ್ನೊಳಗೊಂಡ ಪೂರ್ಣ ವಿವರಗಳನ್ನು ಪಾಲಿಕೆಯ ವೆಬ್‌ಸೈಟ್‌ನಲ್ಲಿ ಮತ್ತು ಕಡತದಲ್ಲಿ ಲಗತ್ತಿಸಿರಬೇಕು*
5. *ಪ್ರತಿ ಜಾಹೀರಾತಿನ ಫಲಕದಲ್ಲಿ ನೊಂದಣಿ ಸಂಖ್ಯೆ ಸಮೇತ ಪ್ರಾರಂಭ ಮತ್ತು ಮುಕ್ತಾಯದ ದಿನಾಂಕ ನಮೂದಿಸುವುದು ಕಡ್ಡಾಯವಾಗಿರುತ್ತದೆ.*

*ಆಯುಕ್ತರ ದಿನಾಂಕ: 26–05–2016ರ ಟಿಪ್ಪಣಿಯಲ್ಲಿನ ಅಂಶಗಳೊಂದಿಗೆ ಮೇಲ್ಕಂಡ ಅಂಶಗಳನ್ನು ಅಳವಡಿಸಿಕೊಂಡು ಒಪ್ಪಲು ಸಮಿತಿಯು ತೀರ್ಮಾನಿಸಿತು.*

(ಎಮ್. ಶಿವರಾಜು)
ಅಧ್ಯಕ್ಷರು
ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ